

# ಶ್ರೀಸರ್ವಮೂಲ ಸಂದೇಶ

## “ವಿಷ್ಣುಭಕ್ತಿ ಪುಣ್ಯವಂತರಿಗೆ ಮಾತ್ರ ಲಭ್ಯ”

**ನಹ್ಯಪುಣ್ಯವತಾಂ ಲೋಕೇ ಮೂಢಾನಾಂ ಕುಟಿಲಾತ್ಮನಾಮ್ ।**
**ಭಕ್ತಿರ್ಭವತಿ ಗೋವಿಂದೇ ಸ್ಮರಣಾಂ ಕೀರ್ತನಂ ತಥಾ ॥**

ಈ ಜಗತ್ತಿನಲ್ಲಿ ಬಹು ಜನ್ಮಗಳ ಪುಣ್ಯಫಲವಿಲ್ಲದ, ಭಗವಂತನ ಅರಿವಿಲ್ಲದ ತಾಮಸ ಸ್ವಭಾವದ ಮಂದಿಗೆ ಗೋವಿಂದನಲ್ಲಿ ಭಕ್ತಿಯಾಗಲಿ; ಗೋವಿಂದ ನಾಮಸ್ಮರಣೆ ಕೀರ್ತನೆಯಾಗಲಿ ಎಂದಿಗೂ ಬರದು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ–8 ಸಂಚಿಕೆ–3 ಸರ್ವಧಾರಿ ಸಂ.॥ ಮಾಘ–ಪಾಲ್ಗುಣ ಮಾರ್ಚ್ 2009

ಸಂಸ್ಥಾಪಕರು:

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀವಿದ್ಯಾಮಾನ್ಯ ಪ್ರಕಾಶನ

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಸಾಧನೆಗೊಂದು ಹೆದ್ದಾರಿ** | | 12 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 16 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 22 |
| **ಜೀವನಯಜ್ಞ** | ಶ್ರೀ ಸುನಂದಕೀ | 24 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ | 27 |
| **ವಿಷ್ಣುಪುರಾಣ** | ಸ್ಫೂರ್ತಿ | 29 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 31 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 33 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 35 |
| **ವಿಶ್ವನಲ್ಲಿ ವಿಶ್ವರೂಪದ ದರ್ಶನ** | ಡಿ. ಗುರುಪ್ರಸಾದ್ ಭಟ್ | 38 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**
ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | : ರೂ. **8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಸ್ವಮಾಯಯಾ ಸೃಷ್ಟಂ ಇದಂ ಸದಸತ್ ಲಕ್ಷಣಂ ವಿಭುಃ।**
**ಪ್ರವಿಷ್ಟ ಈಯತೇ ತತ್ತತ್‌ಸ್ವರೂಪೋಽಗ್ನಿಃಇವ ಏಧಸಿ॥**

ಅವಧೂತರು ಯದು ಮಹಾರಾಜರಿಗೆ ತನ್ನ ಇಪ್ಪತ್ನಾಲ್ಕು ಗುರುಗಳನ್ನು ಪರಿಚಯಿಸುತ್ತಾ ಐದನೇ ಗುರುಗಳಾದ ಅಗ್ನಿಯಿಂದ ತಾವು ಕಲಿತ ಪಾಠವನ್ನು ಒಪ್ಪಿಸುತ್ತಿದ್ದಾರೆ. ಅಗ್ನಿಯಿಂದ ಭಗವಂತನ ಪರಿಚಯದ ಸುಂದರ ವಿವರಣೆ ಇಲ್ಲಿದೆ. ಕಾಣದಿದ್ದ ದೇವರನ್ನು ಕಾಣಲು ಅಗ್ನಿಯು ಒಳ್ಳೆಯ ಆದರ್ಶ. ಅಗ್ನಿಯು ಭಗವಂತನ ಅಸ್ತಿತ್ವದ ಚಿಂತನೆಗೆ ಒಳ್ಳೆಯ ಉದಾಹರಣೆ. ಅಗ್ನಿಯು ನಿರ್ಮಾಣವಾಗಬೇಕಾದರೆ ನಾವು ಮಾಡಬೇಕಾದ ಬಗೆ ಏನು? ಎರಡು ಮರದ ತುಂಡುಗಳನ್ನು ಕೈಗೆತ್ತಿಕೊಳ್ಳಬೇಕು. ಎರಡು ತುಂಡುಗಳನ್ನು ಪರಸ್ಪರವಾಗಿ ತಿಕ್ಕಬೇಕು ವೇಗವಾಗಿ ಮತ್ತೂ ಮತ್ತೂ ಸಂಘರ್ಷಕ್ಕೆ ಒಳಪಡಿಸಿದಾಗ ಹೊಗೆ ಕಾಣಿಸುತ್ತದೆ. ಹೊಗೆಯು ಅಗ್ನಿಯ ಧ್ವಜ. ಹೊಗೆ ಬಂದರೆ ಅಗ್ನಿ ಸಿದ್ಧವಾಗಿದೆ ಎಂದು ಅರ್ಥ. ಇನ್ನು ಸ್ವಲ್ಪ ತಿಕ್ಕಿದಾಗ ಅಗ್ನಿ ಉರಿಯಲು ಪ್ರಾರಂಭಿಸುತ್ತದೆ. ಅಗ್ನಿ ಎಲ್ಲಿಂದ ಬಂತು. ಉತ್ತರ ಸುಲಭ. ಕಟ್ಟಿಗೆಗಳಿಂದ. ಕಟ್ಟಿಗೆಯಿಂದಾದರೂ ಬೆಂಕಿ ಹೇಗೆ ನಿರ್ಮಿತವಾಯಿತು? ಶೂನ್ಯದಿಂದ ಸೃಷ್ಟಿಯಾಗಲು ಖಂಡಿತಾ ಸಾಧ್ಯವಿಲ್ಲ. ಕಟ್ಟಿಗೆಯಿಂದ ಬೆಂಕಿ ಬರಬೇಕಾದರೆ ಕಟ್ಟಿಗೆಯಲ್ಲಿ ಬೆಂಕಿ ತುಂಬಿಕೊಂಡಿರಲೇಬೇಕು. ಕಟ್ಟಿಗೆಯಲ್ಲಿ ಬೆಂಕಿ ಇದ್ದದ್ದರಿಂದಲೇ ತಿಕ್ಕಿದಾಗ ಬೆಂಕಿ ಕಾಣಿಸಿಕೊಂಡಿತು. ಕಟ್ಟಿಗೆಯಲ್ಲಿ ಬೆಂಕಿ ಇದ್ದಿದ್ದರೆ ಸಂಘರ್ಷಕ್ಕಿಂತ ಮೊದಲು ಯಾಕೆ ಕಾಣಿಸಿಲಿಲ್ಲ? ಬೆಂಕಿಯ ಸಾರ್ಮರ್ಥ್ಯ ಅದು. ಸಂಘರ್ಷದಿಂದಲೇ ಕಾಣಿಸಿಕೊಳ್ಳುವ ಸ್ವಭಾವ ಅಗ್ನಿಯದ್ದು. ಇದು ಭಗವಂತನ ಬಗ್ಗೆ ಅಗ್ನಿಯಿಂದ ಸಿಕ್ಕಿದ ಒಳ್ಳೆಯ ಚಿಂತನೆ. ಏನದು?

ಭಗವಂತ ಎಲ್ಲಾ ಕಡೆ ಇದ್ದಾನೆ. ಇಲ್ಲಾ ಕಡೆ ಇದ್ದರೆ ಸರ್ವತ್ರವ್ಯಾಪಿಯಾದ ಭಗವಂತ ಯಾಕೆ ಕಾಣಿಸಲಿಲ್ಲ? ಈ ಪ್ರಶ್ನೆಗೆ ಉತ್ತರ ಅಗ್ನಿ ನೀಡುತ್ತಾನೆ. ಕಟ್ಟಿಗೆ ಇಡೀ ಅಗ್ನಿ ವ್ಯಾಪಿಸಿದ್ದರೂ ಹೇಗೆ ಅಗ್ನಿ ಕಾಣಿಸುವುದಿಲ್ಲ. ಅಲ್ಲಿ ಇದ್ದರೂ ಕಾಣಿಸದೇನೇ ಇರುವ ಸಾಮರ್ಥ್ಯ ಅಗ್ನಿಯದ್ದೋ, ಅದೇ ಪರಿ ಭಗವಂತನದ್ದು. ಭಗವಂತ ತನ್ನ ಸಾರ್ಮರ್ಥ್ಯದಿಂದ ಕಾಣಿಸದೇನೇ ಅಲ್ಲಿ ಇರಬಹುದು. ಜಡವಾದ ಅಗ್ನಿಗೇನೇ ಇಷ್ಟು ಸಾಮರ್ಥ್ಯ ಇದ್ದರೆ, ಆ ಅಗ್ನಿಯನ್ನೇ ಸೃಷ್ಟಿಸಿದ, ಅಗ್ನಿಗೆ ಆ ಸಾಮರ್ಥ್ಯವನ್ನು ಕೊಟ್ಟ ಭಗವಂತನ ಶಕ್ತಿ ಎಷ್ಟಿರದು.

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ಕಟ್ಟಿಗೆಯಲ್ಲಿ ಬೆಂಕಿ ಮೊದಲು ಕಾಣಿಸದೇ ಹೋದರೂ ಆಮೇಲಂತೂ ಕಾಣಿಸುವುದು ಸತ್ಯ. ಆಮೇಲೆ ಅಂದರೆ ಏನು? ಪರಸ್ಪರ ತಿಕ್ಕಾಟವಾದ ಬಳಿಕ ಎಂದು ತಾನೇ ಅರ್ಥ. ಹಾಗಾದರೆ ಭಗವಂತನೂ ಕೂಡ ಪ್ರತಿಯೊಂದು ಕಡೆ ಇದ್ದರೂ ಕೂಡ ಕಾಣಿಸದೇ ಹೋದರೂ ಅಮೇಲೆ ಕಾಣಿಸುತ್ತಾನೆ. ಅಮೇಲೆ ಅಂದರೆ? ಸಂಘರ್ಷವಾದ ಬಳಿಕ. ಅದೇನು ಸಂಘರ್ಷ? ಯಾವುದರ ಜೊತೆಗೆ ಸಂಘರ್ಷ? ಸಂಘರ್ಷ ಎಂದರೆ ಏನು? ಸಂಘರ್ಷ ಅಂದರೆ ಎರಡು ವಸ್ತುಗಳ ತಿಕ್ಕಾಟ. ಎರಡು ವಸ್ತುಗಳು ಎಂದರೆ ಗುರು ಮತ್ತು ಶಿಷ್ಯರು. ಈ ಎರಡು ಕಟ್ಟಿಗೆಗಳಲ್ಲಿ ತಿಕ್ಕಾಟವಾಗಬೇಕು. ಶಿಷ್ಯ ವಿಧೇಯನಾಗಿ ಪ್ರಶ್ನಿಸಬೇಕು. ಗುರುಗಳು ಶಾಂತವಾಗಿ, ಪ್ರಸನ್ನರಾಗಿ ಉತ್ತರಿಸಬೇಕು. ಗುರುಗಳು ಹೇಳಿದ್ದು ಅರ್ಥವಾಗದೇ ಇದ್ದಾಗ, ಅಂದರೆ ಅದರ ಮೇಲೆ ಆಕ್ಷೇಪಗಳು ಅಥವಾ ಸಂಶಯಗಳು ತಲೆದೋರಿದಾಗ ಶಿಷ್ಯನು ಗುರುಗಳ ಮುಂದೆ ದಾಂತನಾಗಿ ತನ್ನ ಪ್ರಶ್ನೆಯನ್ನು ಪ್ರಸ್ತಾಪಿಸಬೇಕು. ಹೀಗೆ ಗುರು ಶಿಷ್ಯರುಗಳ ಮಧ್ಯೆ ನಡೆಯುವ ವಾದ ಕಥೆಯೇ ಸಂಘರ್ಷ.

ಗುರುಗಳಿಂದ ಸಂಗ್ರಹಿಸಿದ ಪ್ರಮೇಯಗಳ ಬಗ್ಗೆ ತನ್ನ ಮನಸ್ಸಿನಲ್ಲೇ ತಾನೇ ಮತ್ತೆ ಮತ್ತೇ ಪ್ರಶ್ನಿಸಿದಾಗ ಆಗುವ ಚಿಂತನೆಯ ಮನನೆಯೇ ಇನ್ನೊಂದು ರೀತಿಯ ಸಂಘರ್ಷ. ಇಂತಹ ಶ್ರವಣ ಮನನ ಧ್ಯಾನ ರೂಪವಾದ ಬ್ರಹ್ಮಜಿಜ್ಞಾಸೆಯೇ ನಿಜವಾದ ಸಂಘರ್ಷ. ಇಂತಹ ಸಂಘರ್ಷವಾದಾಗ ಕಟ್ಟಿಗೆಯಲ್ಲಿ ಅಡಗಿದ ಅಗ್ನಿಯು ಬಹಿರ್ಗೋಚರವಾಗುವಂತೆ ಇಡೀ ಜಗತ್ತಿನಲ್ಲಿ ತುಂಬಿದ ಭಗವಂತ ಕಂಡೇ ಕಾಣುತ್ತಾನೆ.

ಭಗವಂತ ತನ್ನ ಮಾಯೆಯಿಂದ ಅಂದರೆ ಇಚ್ಛೆಯಿಂದ ಈ ಜಗತ್ತನ್ನು ಸೃಷ್ಟಿಸಿದ. ಜಗತ್ತು ಸತ್ ಅಸತ್ ಎಂಬುದಾಗಿ ಎರಡು ಪ್ರಕಾರ. ಸತ್ ಅಂದರೆ ಸ್ಥೂಲವಾದ ಮಣ್ಣು ನೀರು ಬೆಂಕಿ ಎಂಬ ಪ್ರಪಂಚ. ಅಸತ್ ಅಂದರೆ ಸೂಕ್ಷ್ಮವಾದ, ಅಳತೆಗೆ ಎಟಕದ ಆಕಾರವಿಲ್ಲದ, ಗಾಳಿ ಮತ್ತು ಅವಕಾಶಗಳು. ಹೀಗೆ ಸ್ಥೂಲ ಸೂಕ್ಷ್ಮವಾದ ಪ್ರಪಂಚವನ್ನು ಸೃಷ್ಟಿಮಾಡಿ ಅದಕ್ಕೆ ಆಕಾರವನ್ನು ಕೊಡುವುದಕೋಸ್ಕರ ಭಗವಂತ ಆವಾವ ಪದಾರ್ಥಗಳಿಗೆ ಅನುಗುಣವಾಗಿ ಅವಾವ ವಸ್ತುಗಳಲ್ಲಿ ಪ್ರವೇಶಿಸುತ್ತಾನೆ. ಆದ್ದರಿಂದ ವಸ್ತುವಿರುವಷ್ಟು ಕಾಲ ಭಗವಂತ ಅಲ್ಲಿ ಇರಲೇಬೇಕು. ಸ್ಥೂಲವಾದರೇ ಆ ಅಧಿಷ್ಠಾನದಲ್ಲಿ ಸ್ಥೂಲರೂಪದಿಂದ. ಸೂಕ್ಷ್ಮವಾದರೇ ಸೂಕ್ಷ್ಮರೂಪದಿಂದ ಭಗವಂತ ಪ್ರವಿಷ್ಟನಾಗುತ್ತಾನೆ. ಅದು ಹೇಗೆ ಎನ್ನುವ ಪ್ರಶ್ನೆಗೆ ಕಟ್ಟಿಗೆಯಲ್ಲಿ ತುಂಬಿರುವ ಬೆಂಕಿಯೇ ಉದಾಹರಣೆ. ಕಟ್ಟಿಗೆಯು ಚಿಕ್ಕದಾಗಿದ್ದರೆ ಬೆಂಕಿಯ ಸ್ವರೂಪ ಚಿಕ್ಕದು. ಕಟ್ಟಿಗೆಯ ಗಾತ್ರ ಬೃಹತ್ ಆಗಿದ್ದರೆ ಬೆಂಕಿಯ ಪರಿಮಾಣವೂ ಬೃಹತ್. ಅದರಂತೆಯೇ ಭಗವಂತನೂ ಕೂಡ. ಇದೇ ಅಗ್ನಿಯಿಂದ ಅವಧೂತರು ಕಲಿತ ಪಾಠ.

★

ಇದು ವೇದ-ಮಹಾಭಾರತ ಮುಂತಾದ ಇತಿಹಾಸ-ಪುರಾಣಗಳ ಸಾರ.



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಹಿಂದಿನ ಜನ್ಮವನ್ನು ತಿಳಿಯದ ಕಾರಣ ಜೀವಿಯು ತನ್ನ ಈ ಜನ್ಮದ ಸ್ವರೂಪವನ್ನು ತಿಳಿದು ದುಃಖಪಡುವುದಿಲ್ಲ. ಆದರೆ ಹಿಂದಿನ ಶ್ರೇಷ್ಠವಾದ ಜನ್ಮದಲ್ಲಿ ಇರುವಾಗ, ಈ ಜನ್ಮದಲ್ಲಿ ತಾನು ಮಾಡಿದ ಪಾಪಕರ್ಮಗಳಿಂದ ಮುಂದೆ ಯಾವ ಜನ್ಮವನ್ನು ಹೊಂದುತ್ತೇನೋ ಎಂಬುದಾಗಿ ವಿಚಾರಮಾಡಿದರೆ ಮರಣಭಯವುಳ್ಳವನಾಗುತ್ತಾನೆ. ಹೇ! ಅರ್ಜುನ ಪ್ರಕೃತದಲ್ಲಿ ನೀನು ಯಾವ ಭೀಷ್ಮ–ದ್ರೋಣಾದಿಗಳ ವಿಷಯದಲ್ಲಿ ದುಃಖಪಡುತ್ತೀಯೋ ಅವರು ಧರ್ಮಸ್ವರೂಪರೂ, ಬ್ರಹ್ಮಜ್ಞಾನಿಗಳೂ, ಮಹಾತೇಜಸ್ವಿಗಳೂ ಆಗಿರುತ್ತಾರೆ. ಪರಮ ಧಾರ್ಮಿಕರಾದ್ದರಿಂದ ಯುದ್ಧದಲ್ಲಿ ಅವರು ಈ ದೇಹವನ್ನು ತ್ಯಜಿಸಿದರೂ ಇದಕ್ಕಿಂತಲೂ ಶ್ರೇಷ್ಠವಾದ ದೇವತಾಶರೀರವನ್ನು ಹೊಂದುತ್ತಾರೆ. ಅವರಿಗೆ ಮರಣದ ದುಃಖವಿಲ್ಲವಾದ ಕಾರಣ ಈ ದೇಹವನ್ನು ನಾವು ಯಾವಾಗ ಬಿಡುತ್ತೇವೆ ಎಂಬುದಾಗಿ ಯೋಚಿಸುತ್ತಿದ್ದಾರೆ. ಮರಣಕ್ಕಾಗಿ ಅವರೇ ದುಃಖಿಸದೇ ಇರುವಾಗ ಅವರ ಮರಣದ ವಿಷಯದಲ್ಲಿ ನೀನು ದುಃಖಪಡುವುದು ಬರೀ ಅಪಲಾಪ ಮಾತ್ರ.

ದೇಹ ಮತ್ತು ಆತ್ಮ ಇವೆರಡು ಬೇರೆ ಬೇರೆ ಆಗಿಲ್ಲ. ವೀಳ್ಯದೆಲೆ, ಅಡಿಕೆ, ಸುಣ್ಣ ಇವುಗಳನ್ನು ಒಟ್ಟು ಸೇರಿಸಿದಾಗ ಈ ಮೂರರಲ್ಲೂ ಇರದ ಬೇರೆಯೇ ಆದ ರಕ್ತರೂಪ ಬರುತ್ತದೆ. ಅದೇ ರೀತಿ ಪೃಥಿವ್ಯಾದಿ ಪಂಚಭೂತಗಳಲ್ಲಿ ಇಲ್ಲದೇ ಇದ್ದ ಒಂದು ಜ್ಞಾನಶಕ್ತಿಯು ಪಂಚಭೂತಗಳ ಸಂಯೋಗದಿಂದಾಗಿ ದೇಹರೂಪದಿಂದ ವಿಕಾರವನ್ನು ಹೊಂದುತ್ತದೆ ಎಂಬ ಚಾರುವಾಕನ ಮತವನ್ನು ಅನುಸರಿಸಿ ದೇಹ ಮತ್ತು ಆತ್ಮ ಒಂದೇ ಎಂಬುದಾಗಿ ತಿಳಿದು, ಈ ಯುದ್ಧದಿಂದ ಬಂಧುಗಳ ನಾಶವಾಗುವ, ಈ ದೇಹಕ್ಕೆ ಪ್ರತಿನಿಧಿಯಾಗಿ ಇನ್ನೊಂದು ದೇಹ ಅವರಿಗೆ ಬರುವ ಸಂಭವವಿಲ್ಲ ಎಂಬುದಾಗಿ ನೀನು ದುಃಖ ಮಾಡುವುದು ಯುಕ್ತವಲ್ಲ. ಧೀರನಿಗೆ ಇಂತಹ ಮೋಹವು ಬರುವುದಿಲ್ಲ. ಧೀರನಾದ ನಿನಗೆ ಇಂತಹ ಮೋಹವು ಯಾಕಾದರೂ ಬಂತು?

ಆತನನ್ನು ನಂಬಿ ಕೆಟ್ಟವರಿಲ್ಲ.

"ಮಮ ದೇಹಃ" ಎಂಬುದು ಅನುಭವದ ಮಾತು ನನ್ನ ದೇಹ ಎಂಬ ಅರ್ಥದಲ್ಲಿ ಬರುತ್ತದೆ. ನಾನು ಎಂಬ ಆತ್ಮರೂಪವಾದ ವಸ್ತು ಮತ್ತು ದೇಹ ಬೇರೆ ಬೇರೆಯಾಗಿ ಇರುವಾಗ ಮಾತ್ರ ಮಮ ದೇಹ ಎಂಬಂತಹ ಮಾತು ಬರಲು ಸಾಧ್ಯ. ನನ್ನ ಮನೆ ಎಂಬ ಅನುಭವದ ವಾಕ್ಯದಲ್ಲಿ ಮನೆ ಬೇರೆ ನಾನು ಬೇರೆ ಎಂದು ತೋರುವಂತೆ ಸ್ಪಷ್ಟವಾಗಿ ದೇಹಾತ್ಮಭೇದವು ಅನುಭವಸಿದ್ಧವಾದ ಕಾರಣ ಈ ಭೇದವನ್ನು ಎಲ್ಲರಿಗೂ ತಿಳಿದುಕೊಳ್ಳಲು ಅವಕಾಶವಿದೆ.

ಬಾಲ್ಯ ಯೌವ್ವನ ಮತ್ತು ವಾರ್ಧಕ್ಯದ ಮೂರು ಶರೀರಗಳಲ್ಲಿ ಒಬ್ಬನೇ ಆತ್ಮನ ಅನುಭವವಿದೆ. ಶರೀರ ಬೇರೆ ಬೇರೆಯಾದರೂ ಆತ್ಮವು ಒಬ್ಬನೇ ಎಂದ ಪ್ರಯುಕ್ತ ದೇಹಾತ್ಮ ಬೇಧವನ್ನು ಒಪ್ಪಬೇಕಾಗುತ್ತದೆ. ಬಾಲ್ಯ ಯೌವ್ವನ, ವಾರ್ಧಕ್ಯಗಳಲ್ಲಿ ಶರೀರ ಒಂದೇ ಆಲ್ಲ. ಪರಮಾಣುಗಳು ಭಿನ್ನವಾದ್ದರಿಂದ ಶರೀರಗಳು ಬೇರೆ ಬೇರೆಯಾಗಿಯೇ ಇರುತ್ತದೆ. ಅವುಗಳಲ್ಲಿ ಇರುವ ಆತ್ಮನು ಒಬ್ಬನೇ ಆಗಿರುತ್ತಾನೆ ಎಂಬ ಅನುಭವವಿದು. ಹುಟ್ಟಿದ ಮಗು ಹಾಗೂ ದನದ ಕರು ಸ್ತನ್ಯಪಾನವನ್ನು ಸ್ವತಃ ತಾನಾಗಿಯೇ ಮಾಡುವುದು ಅನುಭವಸಿದ್ಧವಾಗಿದೆ. ಅವುಗಳಿಗೆ ಸ್ತನ್ಯಪಾನದಿಂದ ಹಸಿವು–ತೃಷೆಗಳು ಪರಿಹಾರವಾಗುತ್ತದೆ ಎಂಬ ಅನುಭವವು ಇಲ್ಲದೇ ಹೋದರೆ ಸ್ತನ್ಯಪಾನದಲ್ಲಿ ಪ್ರವೃತ್ತಿ ಕೂಡುವುದಿಲ್ಲ. ಅವುಗಳು ಸ್ತನ್ಯಪಾನದಲ್ಲಿ ಪ್ರವೃತ್ತಿಯನ್ನು ಮಾಡಿದ್ದರಿಂದ ಅವುಗಳಿಗೆ ಅನುಭವವು ಇದೆ ಎಂಬುದು ಸಿದ್ಧವಾಯಿತು. ಆಗ ತಾನೇ ಹುಟ್ಟಿದ ಮಗು ಹಾಗೂ ಕರುವಿಗೆ ಈ ಅನುಭವವು ಹೇಗೆ ಬರಲು ಸಾಧ್ಯ? ಆದ್ದರಿಂದ ಹಿಂದಿನ ಜನ್ಮವನ್ನು ಒಪ್ಪಿ, ಆ ಜನ್ಮದ ಅನುಭವದಿಂದ ಸ್ಮರಣೆ ಉಂಟಾಗಿ, ಆ ಸ್ಮರಣೆಯಿಂದಾಗಿ ಈ ಜನ್ಮದಲ್ಲಿ ಹುಟ್ಟಿದ ತಕ್ಷಣ ಸ್ತನ್ಯಪಾನದಲ್ಲಿ ಪ್ರವೃತ್ತಿಮಾಡಿತು ಎಂಬುದಾಗಿ ಹೇಳಲೇಬೇಕಾಗುತ್ತದೆ. ಒಬ್ಬನೇ ಆತ್ಮನಿಗೆ ಹಲವಾರು ಜನ್ಮ ಉಂಟು ಎಂಬುದು ಸಿದ್ಧವಾಗುತ್ತದೆ. ಈ ರೀತಿಯಾಗಿ ಒಂದು ಆತ್ಮನಿಗೆ ಅನೇಕ ದೇಹವುಂಟು ಎಂಬುದು ಸಿದ್ಧವಾದ ಪ್ರಯುಕ್ತ ಆತ್ಮಬೇರೆ ದೇಹಬೇರೆ ಎಂಬುದು ಸಿದ್ಧವಾಯಿತು. ಒಂದೇ ತಂದೆಯ ಮಕ್ಕಳುಗಳಲ್ಲಿ ಒಂದೊಂದು ಮಗುವಿಗೆ ಒಂದೊಂದು ವಿದ್ಯೆಯಲ್ಲಿ ನೈಪುಣ್ಯ ಇರುವ ಹಾಗೇ ಇನ್ನೊಂದು ವಿದ್ಯೆಯಲ್ಲಿ ಎಷ್ಟೇ ಪ್ರಯತ್ನಪಟ್ಟರೂ ಪ್ರಾವೀಣ್ಯ ಬರುವುದಿಲ್ಲ. ಇದನ್ನು ಪರಿಶೀಲಿಸಿದರೆ ಇದನ್ನು ಆನುವಂಶೀಯಗುಣ ಎಂದು ಹೇಳಲು ಬರುವುದಿಲ್ಲ. ಆನುವಂಶೀಕಗುಣವಾಗಿದ್ದರೆ ತಂದೆಗೆ ಇದ್ದ ವಿದ್ಯೆಯಲ್ಲಿ ಎಲ್ಲಾ ಮಕ್ಕಳಿಗೂ ಪ್ರಾವೀಣ್ಯ ಬರಬೇಕಿತ್ತು. ಆದರೆ ಮಕ್ಕಳು ಮಾತಾಪಿತೃವಂಶದಲ್ಲಿ ಇಲ್ಲದೇ

(11ನೇ ಪುಟಕ್ಕೆ)

ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ, ಬರಹ: ಕೃಷ್ಣಾ

**ಪಂಚಜಿತ್ವಾ**–ಐದು ಇಂದ್ರಿಯಗಳ ನಿಗ್ರಹ ಮಾಡಬೇಕು. ಧೃತರಾಷ್ಟ್ರನಲ್ಲಿ ಇಂದ್ರಿಯ ನಿಗ್ರಹ ಇರಲಿಲ್ಲ. ಎಲ್ಲವನ್ನೂ ಕೂಡಿಹಾಕುವ ಚಾಪಲ್ಯ, ಇನ್ನೂ ಬೇಕೆಂಬ ಆಸೆ ಇವುಗಳಿಂದ ಅವನು ಹಾಳಾಗುತ್ತಿರುವುದು ವಿದುರನಿಗೆ ಚೆನ್ನಾಗಿ ತಿಳಿದಿತ್ತು. ತಾನು ತನ್ನ ಮಕ್ಕಳನ್ನು ಕಳೆದುಕೊಂಡ. ಅದರ ನಂತರ ಧರ್ಮರಾಜ ಇವನಿಗೆ ಒಳ್ಳೆಯ ಮನೆ ಮಾಡಿಕೊಟ್ಟ. ಪ್ರತೀದಿನವೂ ಕಾಲ ಕಾಲಕ್ಕೆ ಆಹಾರ ಸರಬರಾಜು ಮಾಡಿಸಿದ. ನಕುಲ ಸಹದೇವರನ್ನು ಅವನ ಕಾಲುಗಳನ್ನು ಒತ್ತಲಿಕ್ಕೆ ವ್ಯವಸ್ಥೆ ಮಾಡಿದ. ಧೃತರಾಷ್ಟ್ರನಿಗೆ ಆಹಾರವನ್ನು ಕಾಯುವುದು, ಅದನ್ನು ಉಣ್ಣುವುದು ಒಂದೇ ಕೆಲಸವಾಗಿತ್ತು. ಇದನ್ನು ಕಂಡ ಭೀಮಸೇನನು, ತನ್ನ ದೊಡ್ಡಪ್ಪ ಹೀಗೆ ತಿಂದು ತಿಂದು ಸಾಯುತ್ತಾನೆ ಎಂಬ ತೀರ್ಮಾನಕ್ಕೆ ಬಂದ. ಯದ್ಯಪಿ, ನಾವು ಜೀವನದಲ್ಲಿ ತಿನ್ನದೆ ಸಾಯಬೇಕು. ಅಂದರೆ ಹದಿನೈದು ದಿವಸಕ್ಕೊಮ್ಮೆ ಉಪವಾಸ ಮಾಡಿ ಸತ್ತರೆ, ಅದು ಅವನಿಗೆ ಬಹಳ ಶ್ರೇಯಸ್ಸು ಎನ್ನುತ್ತಾರೆ. ಅದೂ ಏಕಾದಶಿಯಂದು ಪ್ರಾಣ ಹೋಯಿತೆಂದರೆ ಅವನಿಗೆ ಮೋಕ್ಷ ಖಂಡಿತ ಫಲಿಸುತ್ತದೆ ಎಂದು ಶಾಸ್ತ್ರಕಾರರು ಹೇಳಿದ್ದಾರೆ. ಹಾಗಾಗಿ ಭೀಮಸೇನನು ಧೃತರಾಷ್ಟ್ರನನ್ನು ತಿದ್ದಲು ಆಲೋಚನೆ ಮಾಡಿದನು.

ಧರ್ಮರಾಜನು ಆಹಾರವನ್ನು ಕೊಟ್ಟು ದೊಡ್ಡಪ್ಪನ ಮೇಲ್ವಿಚಾರಣೆ ಮಾಡಿ ತಿರುಗಿ ತನ್ನ ಕೊಠಡಿಗೆ ಹೋದ ಮೇಲೆ ಭೀಮಸೇನನು ಧೃತರಾಷ್ಟ್ರನ ಕೊಠಡಿಯನ್ನು ಪ್ರವೇಶಿಸಿದನು. ಧೃತರಾಷ್ಟ್ರನು ಉಣ್ಣಲಿಕ್ಕೆ ಪ್ರಾರಂಭಿಸಿದನಷ್ಟೆ. ಭೀಮಸೇನ ಜೋರಾಗಿ ಏನನ್ನು ಮಾಡುತ್ತಿದ್ದೀರಿ' ಎಂದು ಕಾಲೊತ್ತುತ್ತಿರುವ ನಕುಲ ಸಹದೇವರನ್ನು ಪ್ರಶ್ನಿಸಿದನು. ತಾನು ಭೀಮಸೇನನೆಂದು ಕುರುಡನಾದ ಧೃತರಾಷ್ಟ್ರನಿಗೆ ಗೊತ್ತುಪಡಿಸಿದನು. **'ಜರಟಸ್ಯ ಸುತಾಃ ಹತಾಃ'** ಜರಟ ಅಂದರೆ ಮುದುಕ. ದೊಡ್ಡಪ್ಪ ಎಂದು ಕರೆಯದೆ ಮುದುಕನ ನೂರು ಜನ ಮಕ್ಕಳು ತನ್ನ ಎರಡು ಕೈಗಳ ಮಧ್ಯೆ ಸಿಕ್ಕಿಕೊಂಡು ಸತ್ತರು. ತಾನು ಬಾಲ್ಯದಿಂದ ಒಂದೇ ಕಾರಣವನ್ನು ಇಟ್ಟುಕೊಂಡು ಚೆನ್ನಾಗಿ ಚಂದನದಿಂದ ಅಲಂಕರಿಸಿ

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಬೆಳಸಿದ ಭುಜಗಳು ಈಗ ಸಾರ್ಥಕ್ಯ ಕಂಡವು ಎಂದು ಹೇಳಿದನು. ಇದರ ಬಗ್ಗೆ ನಕುಲ ಸಹದೇವರಲ್ಲಿ ಕೇಳಿದಾಗ ಅವರಿಗೆ ಒಂದು ಸಂದಿಗ್ದ ಪರಿಸ್ಥಿತಿ ಉಂಟಾಯಿತು. ಹೌದೆಂದರೆ ಭೀಮಸೇನ ಮಾಡಿದ ಅವಮಾನದಲ್ಲಿ ಧ್ವನಿ ಸೇರಿಸಿದರೆಂದು ಧರ್ಮರಾಜನಿಗೆ ದೂರು ಹೋಗುತ್ತದೆ. ಅವನು ಇವರಿಗೆ ಬೈಯುತ್ತಾನೆ. ಇಲ್ಲವೆಂದರೆ ಭೀಮಸೇನನು ಚುಚ್ಚುತ್ತಾನೆ. ಆದ್ದರಿಂದ ಆಚಾರ್ಯ ಮಧ್ವರು ಈ ಸಂದರ್ಭದಲ್ಲಿ **'ಯಮೌ ತತ್ ಅನ್ವ ಮೋದೇತಾಂ'** ತಲೆ ಅಲುಗಾಡಿಸುವ ಮೂಲಕ ತಮ್ಮ ಸಹಮತಿಯನ್ನು ಸೂಚಿಸಿದರು ಎಂದು ಹೇಳುತ್ತಾರೆ. ಇದರಿಂದ ಭೀಮಸೇನನಿಗೆ ಸಂತೋಷವಾಯಿತು. ನಕುಲಸಹದೇವರು ಏನೂ ಉತ್ತರಿಸದೇ ತನ್ನ ಪಕ್ಷದಲ್ಲಿ ಇದ್ದಾರೆ ಎಂದು ತಿಳಿದ ಕುರುಡ ಧೃತರಾಷ್ಟ್ರನಿಗೂ ಖುಷಿಯಾಯಿತು. ಇದು ಆನಂದತೀರ್ಥರು ಕೊಟ್ಟ ಚಿತ್ರಣ. ಯಾಕೆಂದರೆ ಸ್ವಯಂ ಭೀಮನಾಗಿ ಅಲ್ಲಿ ನಿಂತವರು ಅವರು.

ಹೀಗಿರುವಾಗ ಅಲ್ಲಿ ವಿದುರನು ಪ್ರವೇಶ ಮಾಡಿ ತಾನೂ ಅಣ್ಣನನ್ನೂ ತಿದ್ದಲು ಮುಂದಾಗುತ್ತಾನೆ. 'ಧೃತರಾಷ್ಟ್ರ! ಕೊಟ್ಟಾರದ ಕೀಲಿಕೈ ಭೀಮಸೇನನ ಹತ್ತಿರ ಇರುವುದು. ಅವನು ಕೊಟ್ಟರೆ ಮಾತ್ರ ನಿನಗೆ ಉಣ್ಣಲು ಅನ್ನ ಸಿಗುವುದು. ಪಾಂಡವರು ಕಳುಹಿಸಿದ ಆಹಾರದಲ್ಲಿ ಪ್ರೀತಿ ಅಥವಾ ದ್ವೇಷವಿದೆಯೋ ಎಂದು ವಿಚಾರ ಮಾಡಿರುವೆಯಾ? ಪಾಂಡವರೆಲ್ಲ ಊಟ ಆದ ಮೇಲೆ ಎಡಕೈಯಲ್ಲಿ ಅನ್ನವನ್ನು ಚೆಲ್ಲಿ– ಈ ಪಿಂಡವನ್ನು ಆ ಮುದುಕನಿಗೆ ಹಾಕು ಎಂದು ಆಹಾರ ಕಳಿಸಿಕೊಡುತ್ತಾರೆ. ನಾಯಿಯಂತೆ ಅದನ್ನು ನೀನು ತಿನ್ನುತ್ತಿ.

**ಭೀಮ ಅಪವರ್ಜಿತಂ ಪಿಂಡಂ ಆದತ್ಸೆ ಗೃಹಪಾಲವತ್**

ಆ ಅನ್ನದಲ್ಲಿ ಎಷ್ಟು ಬೈಗಳ ಶಬ್ದವಿದೆ ಎಂದು ನಿನಗೆ ಗೊತ್ತಿದೆಯೋ? ಎಂದು ವಿದುರನೂ ನಿಷ್ಠುರದ ಮಾತುಗಳನ್ನು ಆಡುತ್ತಾನೆ. ಈ ದಿವಸ ಧೃತರಾಷ್ಟ್ರನನ್ನು ತಿದ್ದುವುದಕ್ಕೋಸ್ಕರ ಇಬ್ಬರು ತಯಾರಾಗಿ ನಿಂತ ವ್ಯಕ್ತಿಗಳೆಂದರೆ ಮೊದಲನೆಯ ವ್ಯಕ್ತಿ ಭೀಮಸೇನ. ಎರಡನೆಯವನು ವಿದುರ.

**(ಸಶೇಷ)**

**ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ

ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಭರ, ಭಾರ, ಪರ, ಪಾರ ಹೀಗೆ ವರ್ಣಗಳ ಸಂಧಿಯಿಂದ ಯಾವ ಶಬ್ದದ ಅರ್ಥದಲ್ಲಿ ಬದಲಾವಣೆಯಾಗುತ್ತದೋ ಅದನ್ನು ತಿಳಿದುಕೊಳ್ಳಬೇಕು. ಶಬ್ದ ಹಾಗೂ ಅದರ ನಿಜವಾದ ಅರ್ಥಗಳನ್ನು ತಿಳಿದುಕೊಳ್ಳಬೇಕು. ಕಲ್ಪ, ಜೋತಿಷ್ಯ ಹಾಗೂ ಛಂದಸ್ಸನ್ನು ಬಿಟ್ಟರೆ ಇಲ್ಲಿ ಶೀಕ್ಷಾ, ವ್ಯಾಕರಣ, ನಿರುಕ್ತ ಎಲ್ಲವೂ ಹೇಳಿದ ಹಾಗೆ ಆಯಿತು. ಸಾಮ ಎಂದರೆ ಶಬ್ದ ಅರ್ಥವನ್ನು ಗಮನದಲ್ಲಿಟ್ಟುಕೊಂಡು ಶಬ್ದಗಳನ್ನು ರಚಿಸುವದು. ಸಂತಾನಃ ಎಂದರೆ ಶಬ್ದದ ಪರಂಪರೆ. ಶಬ್ದದ ಪರಂಪರೆಯೇ ವಾಕ್ಯ ಆಗುತ್ತದೆ. ವಾಕ್ಯಗಳನ್ನು ಮಾಡುವದನ್ನು ಕಲಿಯಬೇಕು. ವಾಕ್ಯದ ಸಂತಾನ ಪರಿಛೇದ . ಪರಿಛೇದಗಳಿಂದ ಅಧ್ಯಾಯ ಹೀಗೆ ಮುಂದೆ ಸಾಗುತ್ತದೆ. ವೇದದ ಅಧ್ಯಯನ ಆಗಬೇಕಾದರೆ ಋಕ್, ಸೂಕ್ತ, ಮಂಡಲ, ಅಷ್ಟಕ, ಅಧ್ಯಾಯ ಹೀಗೆ ಕ್ರಮವಾಗಿ ಓದಿಕೊಂಡು ಹೋಗಬೇಕು. ಎಷ್ಟು ಶಬ್ದದ ಸಂತಾನಕ್ಕೆ ಒಂದು ಶ್ಲೋಕ ಆಗುತ್ತದೆ? ಎಷ್ಟು ಶ್ಲೋಕದ ಸಂತಾನಕ್ಕೆ ಒಂದು ಅಧ್ಯಾಯ ಆಗುತ್ತದೆ? ಇವೆಲ್ಲವುಗಳನ್ನು ತಿಳಿದುಕೊಳ್ಳಬೇಕು. ಯಜುರ್ವೇದದಲ್ಲಿ ಐವತ್ತು ಶಬ್ದಗಳಿಗೆ, ಅನುವಾಕ ಎಂದು ಹೇಳಿದ್ದಾರೆ ಈ ಐವತ್ತು ಶಬ್ದಗಳು ಮುಗಿಯುವಾಗ statement ಮುಗಿಯಬೇಕೆಂದಿಲ್ಲ. ಆದರೂ ಅಲ್ಲಿಗೆ ನಿಲ್ಲಿಸಿ ಮುಂದಕ್ಕೆ ಓದಬೇಕು. ಏಕೆಂದರೆ ಯಜುರ್ವೇದದಲ್ಲಿ ಸುಮಾರು 200–300 ಶಬ್ದಗಳ ನಂತರ ಪೂರ್ಣವಿರಾಮ ಬರುತ್ತದೆ. ಇದರ ಪ್ರಕಾರ ಈ ವೇದ ಓದಲು ಸಾಧ್ಯವಿಲ್ಲ. ಹೀಗಾಗಿ ಶಬ್ದದ ಸಂತಾನವನ್ನು ತಿಳಿದುಕೊಳ್ಳಬೇಕು. ಆ ಮೇಲೆ ವೇದಾಧ್ಯಯನ ಪ್ರಾರಂಭ ಮಾಡಬೇಕು. ಇಷ್ಟರವರೆಗೆ ಶೀಕ್ಷಾಶಾಸ್ತ್ರದ ಆರು ಮುಖಗಳನ್ನು ಸ್ಥೂಲವಾಗಿ ನೋಡಿಯಾಯಿತು. ಇದಕ್ಕೆ ಇನ್ನೂ ಆಳವಾದ ಅರ್ಥ ಇದೆ. ಇಷ್ಟರವರೆಗೆ ಹೇಳಿದ್ದು ಕೇವಲ ಶಬ್ದದ ಅರ್ಥ. ಕೇವಲ ಮೇಲಿಂದ ಮೇಲೆ ಕಾಣುವ ಅರ್ಥವನ್ನು ಹೇಳಿದರೆ ಸಾಲದು. ಆದ ಕಾರಣವೇ ಇದನ್ನು ಶೀಕ್ಷಾಶಾಸ್ತ್ರ ಎಂದು ದೀರ್ಘವಾಗಿ ಎಳೆದು ಹೇಳಿದ್ದು. ಎಲ್ಲಾ ಮಂತ್ರಗಳಿಗೂ ಭಗವತ್ಪರವಾದ ಮುಖ ಇದೆ.

ಅಕ್ಷರಗಳನ್ನು ವರ್ಣ ಎಂದು ಯಾಕೆ ಹೇಳುತ್ತಾರೆ? **ವರ್ಣಯತೀತಿ ವರ್ಣಃ** ಅದು

ಅವರಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು

ವರ್ಣಿಸುತ್ತದೆ. ಆದ್ದರಿಂದ ವರ್ಣ. ಅದು ಯಾವುದನ್ನು ವರ್ಣಿಸುತ್ತದೋ ಅದು ನಿಜವಾದ ವರ್ಣ. ಎಲ್ಲಾ ಅಕ್ಷರಗಳು, ವೇದಗಳು ಯಾರನ್ನು ವರ್ಣಿಸುತ್ತವೋ ಅದು ನಿಜವಾದ ವರ್ಣ. ವರ್ಣಗಳಿಂದ ವರ್ಣಿಸಲ್ಪಡುವವನು ಭಗವಂತ. ಅವನೇ ನಿಜವಾದ ವರ್ಣ. ಇನ್ನೊಂದು ಅರ್ಥ ವರ್ಣ ಎಂದರೆ ವರೇಣ್ಯ. ಎಲ್ಲರಿಂದಲೂ ಆಶ್ರಯಿಸಲ್ಪಡುವವ, ಎಲ್ಲಕ್ಕಿಂತ ಹಿರಿಯನಾದವ ವರೇಣ್ಯ. ಎಲ್ಲವು ವರ್ಣಿಸುವ ನಿಜವಾದ ವರ್ಣ ಭಗವಂತ. ಈ ಎಲ್ಲಾ ವರ್ಣಗಳಲ್ಲಿ ಸನ್ನಿಹಿತನಾಗಿ ಇದ್ದುಕೊಂಡು ಅದನ್ನು ಉಚ್ಚರಿಸಲಿಕ್ಕೆ ಶಕ್ತಿಯನ್ನು ಕೊಟ್ಟು ಅದನ್ನು ನಿಯಮಿಸುವವ. ಆದ್ದರಿಂದ ಅವನೇ ನಿಜವಾದ ವರ್ಣ. ಈ ಹಿನ್ನೆಲೆಯಲ್ಲಿ ವರ್ಣಗಳನ್ನು ನೋಡು. ಭಗವಂತನಿಗಾಗಿ ಈ ವರ್ಣಗಳು.

ಸ್ವರಗಳು ಎಂದರೆ **ಅ** ಕಾರ ದಿಂದ **ಅಃ** ವರೆಗೆ ಇರುವ ವರ್ಣಗಳು. ಯಾಕೆ ಇವುಗಳನ್ನು ಸ್ವರಗಳೆಂದು ಹೇಳುತ್ತಾರೆ? **ಸ್ವಯಮೇವ ರಾಜಂತೇ** ಆದ್ದರಿಂದ ಸ್ವರ. ಆದರೆ ನಿಜವಾಗಿ ಸ್ವತಂತ್ರವಾಗಿ ರಾಜಿಸುವವರು ಯಾರು? ಭಗವಂತ ಮಾತ್ರ. ಈ ಸ್ವರಗಳು ನಾವು ಉಚ್ಚಾರ ಮಾಡಿದರೆ ಕೇಳಿಸಿಯಾವು ಇಲ್ಲದಿದ್ದರೆ ಇಲ್ಲ. ಆದರೆ ಅವನು ಸ್ವತಃ ರಾಜಿಸುವವನು. ಭಗವಂತನನ್ನು ಸ್ವರ ಎಂದು ತಿಳಿ. ಅವನು ಸ್ವತಂತ್ರವಾಗಿ ರಾಜಿಸುವವನು ಮಾತ್ರ ಅಲ್ಲ ಸ್ವರಕ್ಕೆ ಇನ್ನೊಂದು ಅರ್ಥ ಇದೆ. ಸ್ವರ ಎಂದರೆ ತನ್ನಲ್ಲೆ ತಾನು ರಮಿಸುವವನು. ತನ್ನಲ್ಲೇ ಆನಂದವನ್ನು ಅನುಭವಿಸುವವನು. ಆತ್ಮಾನಂದಪೂರ್ಣ ಎಂದು ಅರ್ಥ. ಈ ಅರ್ಥ ಯಾರಲ್ಲಿ ಬರಲು ಸಾಧ್ಯ? ಕೇವಲ ಭಗವಂತ ಮಾತ್ರ 'ಸ್ವರ' ಎನಿಸಲ್ಪಡುತ್ತಾನೆ.

ಇನ್ನೂ ಮಾತ್ರಾ ಎಂದರೆ **ಮೀಯಂತೇ ಇತಿ ಮಾತ್ರಾಃ** ಅಳೆಯುವದು (Measurement) ಎಂದು ಅರ್ಥ. ಕಾಲವನ್ನು ಅಳೆಯುವದು ಮಾತ್ರಾ. ಹ್ರಸ್ವ, ದೀರ್ಘ, ಪ್ಲುತಗಳನ್ನು ಕೊಟ್ಟವ ಭಗವಂತ. **ಮಾನಾತ್ ತ್ರಾತಾ ಇತಿ ಮಾತ್ರಾಃ** ಮಾನ ಇದ್ದು ರಕ್ಷಿಸುವವ. ಆದ್ದರಿಂದ ಮಾತ್ರಾ. ಮಾನ ಎಂದರೆ ಜ್ಞಾನ, ನಿರ್ಮಾಣ, ನಾಶ ಎಂದು ಅರ್ಥ ಇದೆ. ಹುಟ್ಟಿಸಿ, ಸಾಯಿಸಿ, ನಮಗೆ ಜ್ಞಾನ ಕೊಟ್ಟು ರಕ್ಷಿಸುವವ ಆದ್ದರಿಂದ ಮಾತ್ರ. ಅವನಿಂದ ಇದು ಮಾತ್ರ ಎನಿಸಿದೆ. ಇನ್ನು ಬಲಂ ಎಂದರೆ (Strength) ನಿಜವಾದ ಬಲ ಅವನು. ಪ್ರಾಣಿಗಳಿಂದ ಉಚ್ಚರಿಸಲ್ಪಡದ ಶಬ್ದಗಳನ್ನು ನಮ್ಮಿಂದ ಉಚ್ಚರಿಸುವ ಬಲಕ್ಕೆ ಕಾರಣನಾದವ ಭಗವಂತ. ಆದ್ದರಿಂದ ಬಲ ಎಂಬ ಪದ ಭಗವಂತನನ್ನು ಹೇಳುತ್ತದೆ.

**(ಮುಂದುವರಿಯುವುದು)**

**ಶ್ರೀಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

ಕಾಪುರುಷರೈದಾರು ಮಂದಿ ಸ
ಮೀಪದಲಿ ಕಾಡುವರು ಎನ್ನನು
ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲ ।
ಶ್ರೀಪದಾಬ್ಜದ ಸೇವೆಯಲಿ ನೆರೆ
ಪಾಪವನು ಪರಿಹರಿಸೆ ನೀ ನಿಜ
ರೂಪಿನಲಿ ಬಂದೊಲಿದು ರಕ್ಷಿಸು ನಮ್ಮನನವರತ ॥೬೪ ॥

ಕೆಟ್ಟ ಜನರು ಐದಾರು ಮಂದಿ ಸಮೀಪದಲ್ಲಿ ನನ್ನನ್ನು ಕಾಡುತ್ತಾರೆ. ನೀನು ಅದನ್ನು ಪರಾಂಬರಿಸದೆ ಅಲಕ್ಷ್ಯ ಮಾಡುತ್ತಿರುವುದು ಸರಿಯಲ್ಲ. ನಿನ್ನ ಶ್ರೀಪಾದಕಮಲದ ಸೇವೆಯಲ್ಲಿ ನಮ್ಮೆಲ್ಲ ಪಾಪವನ್ನು ನೀಗಿಕೊಳ್ಳಬೇಕೆಂದರೆ ನೀನು ನಿಜರೂಪದಲ್ಲಿ ಬಂದು ಒಲಿದು ನಮ್ಮನ್ನು ಸದಾ ಕಾಪಾಡಬೇಕು.

## ಕಾಪುರುಷರೈದಾರು ಮಂದಿ ಸಮೀಪದಲಿ ಕಾಡುವರು ಎನ್ನನು

ಕಾಮ-ಕ್ರೋಧ-ಲೋಭ ಮುಂತಾದ ಐದಾರು ಮಂದಿ ಕೆಟ್ಟ ಜನರು ನನ್ನೆದೆಯಲ್ಲಿಯೇ ಮನೆ ಮಾಡಿಕೊಂಡು ಸಮೀಪದಲ್ಲಿಯೇ ನನ್ನನ್ನು ಕಾಡುತ್ತಿದ್ದಾರೆ. ಐಹಿಕ ಭೋಗ ಭಾಗ್ಯವೆಷ್ಟಿದ್ದರೂ ಸಾಲದು ಇನ್ನೂ ಬೇಕು ಬೇಕೆಂದುಕೊಂಡು ಮನಸ್ಸಿನ ನೆಮ್ಮದಿ ಕಳೆದುಕೊಂಡು ಊರೆಲ್ಲ ಸುತ್ತಿ ಸುತ್ತಿ ಬಳಲುವಂತೆ ಮಾಡುತ್ತಾರೆ. ನಿಶ್ಚಿಂತೆಯಿಂದ ನಿದ್ದೆ ಮಾಡಲೂ ಬಿಡರು. ಇನ್ನು ನಿನ್ನನ್ನು ನೆನೆಯಲು ಬಿಡುವರೆ?

ಐದು ಮತ್ತು ಆರು ಒಟ್ಟು ಹನ್ನೊಂದು ಇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಪಂಚಜ್ಞಾನೇಂದ್ರಿಯಗಳು ಮತ್ತು ಮನಸ್ಸು ಎಂದು ಹನ್ನೊಂದು ಮಂದಿ ದುರ್ಜನರು ಬೇರೆ ನನ್ನನ್ನು ಸಮೀಪದಲ್ಲಿ ಕಾಡುತ್ತಿದ್ದಾರೆ. ತತ್ವಾಭಿಮಾನಿ ಅಸುರರು. ಅವರಿಂದಾಗಿ ಕಣ್ಣು ನಿನ್ನನ್ನು ಕಾಣಲು ಬಯಸದು, ನಾಲಿಗೆ ನಿನ್ನನಾಮವನ್ನೊಲ್ಲದು. ನೋಡಬಾರದ್ದನ್ನು ನೋಡುತ್ತದೆ. ಆಡಬಾರದ್ದನ್ನು ಆಡುತ್ತದೆ. ಎಲ್ಲರೊಡನೆ ಜಗಳ ಮನಸ್ತಾಪ, ನೆಮ್ಮದಿಯೇ ಇಲ್ಲವಾಗಿದೆ.

ಪ್ರತಿದಿನ ಆತನನ್ನು ಪೂಜಿಸಬೇಕು

## ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲ

ಇದಕ್ಕೇನು ಪರಿಹಾರ? ನೀನೇ ಪರಾಂಬರಿಸಿ ನೋಡಬೇಕು. ನಾನೇನು ಬಲ್ಲೆ. ಇಷ್ಟು ಮಾತ್ರ ಹೇಳಬಲ್ಲೆ. ನೀನು ನನ್ನ ಬಗ್ಗೆ ಅಲಕ್ಷ್ಯ ಮಾಡುವುದು ಸರಿಯಲ್ಲ ಎಂದು. ಕಾಪಾಡುವವನು ನೀನೆ ಅಲಕ್ಷ್ಯ ಮಾಡಿದರೆ ಇನ್ನಾರು ನನಗೆ ರಕ್ಷಕರು?

ನೀನು ನನಗೆ ಪ್ರತ್ಯಗಾತ್ಮ, ಅಂತರ್ಯಾಮಿ, ಒಳಗೆ ನಿಂತು ನನ್ನನ್ನು ಸರಿಯಾದ ದಾರಿಯಲ್ಲಿ ನಡೆಸಬೇಕು ಹೊರತು ಪರಾಗಾತ್ಮನಾಗಿ ನನಗೆ ಹೊರಗಿನವನಾಗಿ ಇರುವುದು ಸರಿಯಲ್ಲ. ಒಳಗೇ ನಿಂತು ಒಳಗಿನ ಶತ್ರುಗಳನ್ನು ನೀನು ಹೊರಗೆ ಹಾಕಬೇಕು. ಹೊರಗೆ ಶ್ರೀಕೃಷ್ಣ ವೇದವ್ಯಾಸ ಮುಂತಾದ ಅವತಾರರೂಪಗಳಿಂದ ತತ್ವವನ್ನು ಬೋಧಿಸಿದರೆ ಸಾಲದು ಅದನ್ನು ಕೇಳಿ ಅದರಂತೆ ನಡೆಯಲು ಒಳಗೂ ನಿಂತು ಪ್ರೇರಣೆ ನೀಡಬೇಕು. ಇಲ್ಲದಿದ್ದರೆ, ಗೋರ್ಕಲ್ಲ ಮೇಲೆ ಮಳೆಗರೆದರಾ ಕಲ್ಲು ನೀರ್ಕುಡಿಯಲಹುದೆ? ಎಂದಂತಾದೀತು. ಸಂಧಾನಕ್ಕಾಗಿ ಹೋದ ಶ್ರೀಕೃಷ್ಣ ನೀನು ದುರ್ಯೋಧನನಿಗೆ ಬಹಳ ಉಪದೇಶ ನೀಡಿದೆ. ಅದನ್ನು ಸ್ವೀಕರಿಸುವಂತೆ ಅವನಿಗೆ ಒಳಗಿಂದ ಪ್ರೇರಣೆ ನೀಡಲಿಲ್ಲ.

**ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ**
**ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ ।**
**ಕೇನಾಪಿ ದೇವೇನ ಹೃದಿಸ್ಥಿತೇನ**
**ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥**

ನನಗೆ ಧರ್ಮ ಗೊತ್ತು. ಆದರೆ ಅದು ನನಗೆ ಬೇಕೆನಿಸುವುದಿಲ್ಲ. ಅಧರ್ಮವೂ ಗೊತ್ತು. ಆದರೆ ಬೇಡವೆನಿಸುವುದಿಲ್ಲ. ಏನು ಮಾಡಲಿ, ಒಳಗೆ ಯಾರೋ ನಿಂತು ಪ್ರೇರಿಸುತ್ತಾನೆ, ಅದರಂತೆ ನಡೆಯುತ್ತೇನೆ! ಎನ್ನುತ್ತಾನೆ ದುರ್ಯೋಧನ. ಹಾಗಾಗಬಾರದು. ಪರಾಂಬರಿಸಿ ನೋಡು. ಅದರಿಂದ ನಿನಗೇ ಭಕ್ತವತ್ಸಲನೆಂಬ ಬಿರುದು. ನನಗೆ ಭಕ್ತನೆಂಬ ಬಿರುದು.

## ಶ್ರೀಪದಾಬ್ಜದ ಸೇವೆಯಲಿ ನೆರೆ ಪಾಪವನು ಪರಿಹರಿಸೆ

ಕಲ್ಲಾಗಿ ಬಿದ್ದಿದ್ದ ಅಹಲ್ಯೆಯನ್ನು ಉದ್ಧರಿಸಿದ ನಿನ್ನ ಶ್ರೀಪಾದಕಮಲ ಕಲ್ಲಿನಂತೆ ಜಡನಾಗಿ ಬಿದ್ದಿರುವ ನನ್ನನ್ನೂ ಉದ್ಧರಿಸಲಿ. ಚಿನ್ಮಯವಾದ ಆನಂದಮಯವಾದ ಸುಂದರ ರೂಪವನ್ನು ನನಗೆ ನೀಡಲಿ ಅದಕ್ಕೆ ನಿನ್ನ ಪಾದ ಸೇವೆ ನೀಡು. ನಿನ್ನ ಪಾದ ತೊಳೆದ ನೀರು ಗಂಗೆಯಾಗಿ ಹರಿದು ಮೂಲೋಕದ ಪಾಪವನ್ನು ಕಳೆಯುತ್ತದೆ ಎಂದ ಮೇಲೆ ನಿನ್ನ ಆ ಪಾದಕಮಲ ನನ್ನೊಬ್ಬನ ಪಾಪವನ್ನು ಪರಿಹರಿಸದಿದ್ದೀತೆ?

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು**

## ನೀ ನಿಜರೂಪಿನಲಿ ಬಂದೊಲಿದು ರಕ್ಷಿಸು

ಪ್ರಪಂಚದ ಏಕೈಕ ಸ್ವತಂತ್ರ ಸಾರ್ವಭೌಮ ವ್ಯಕ್ತಿತ್ವ ನಿನ್ನದು. ಅದೇ ನಿನ್ನ ನಿಜರೂಪ. ಅದನ್ನು ನೀನು ಮರೆಮಾಡಿ ಮೂವತ್ತಮೂರು ಕೋಟಿ ದೇವತೆಗಳಲ್ಲಿ ತಾನೂ ಒಬ್ಬನೆಂಬಂತೆ ತೋರಿಕೊಂಡು ನನ್ನನ್ನು ವಂಚಿಸಬೇಡ. ನಿಜರೂಪಿನಲ್ಲಿ ನನ್ನೆಡೆಗೆ ಬಾ. ನನ್ನೆದೆಯಲ್ಲಿ ಸ್ಥಿರವಾಗಿ ನಿಲ್ಲು. **'ನಾಹಂಕರ್ತಾ ಹರಿಃ ಕರ್ತಾ'** ಎಂಬ ಪ್ರಜ್ಞೆಯನ್ನು ನನಗೆ ಸದಾ ನೀಡು. ಅದೇ ನನಗೆ ಶ್ರೀ ರಕ್ಷೆ. ಉಳಿದೆಲ್ಲ ಭೋಗ ಭಾಗ್ಯ ಕೇವಲ ಶಿಕ್ಷೆ. ನಿನ್ನ ಭಕ್ತಿಯಿಂದಲೆ ನನಗೆ ಮುಕ್ತಿ. ಇನ್ನಾವ ಶಕ್ತಿಯುಕ್ತಿಗಳೂ ಕೆಲಸಕ್ಕೆ ಬಾರವು.

---

(4ನೇ ಪುಟದಿಂದ)

ಇರುವ ವಿದ್ಯೆಗಳಲ್ಲೂ ಪ್ರಾವೀಣ್ಯ ಹೊಂದಿರುತ್ತಾರೆ. ಈ ಕಾರಣದಿಂದಲೇ ನಾವು ಜನ್ಮಾಂತರವನ್ನು ಒಪ್ಪಲೇಬೇಕಾಗುತ್ತದೆ. ಹಿಂದಿನ ಜನ್ಮದಲ್ಲಿ ಯಾವ ವಿದ್ಯೆಯನ್ನು ಅವನು ಚೆನ್ನಾಗಿ ಅಭ್ಯಾಸಮಾಡಿರುತ್ತಾನೋ ಆ ವಿದ್ಯೆಯು ಈ ಜನ್ಮದಲ್ಲಿ ಅನಾಯಾಸವಾಗಿ ಬಂದಿರುತ್ತದೆ. ಹಿಂದಿನ ಜನ್ಮದಲ್ಲಿ ಅಭ್ಯಾಸಮಾಡದೇ ಇರುವ ವಿದ್ಯೆಯು ಈ ಜನ್ಮದಲ್ಲಿ ಬಹಳ ಪ್ರಯಾಸಪಟ್ಟು ಅಭ್ಯಾಸ ಮಾಡಿದರೂ ಬರದೇ ಇರುವ ಸಂದರ್ಭ ಇದೆ. ಇದರಿಂದ ಪುನರ್ಜನ್ಮವು ಸಿದ್ಧವಾಗುತ್ತದೆ. ಪುನರ್ಜನ್ಮ ಸಿದ್ಧವಾಗುವಾಗ ದೇಹಾತ್ಮಭೇದವೂ ಸಿದ್ಧವಾಗುತ್ತದೆ. ಅಪೌರುಷೇಯವಾದ, ಅನಾದಿನಿತ್ಯವಾದ, ನಿರ್ದುಷ್ಟವಾದ ವೇದವು ದೇಹಾತ್ಮಭೇದವನ್ನು, ಆತ್ಮನಿತ್ಯ ಎನ್ನುವುದನ್ನು ಸಾರುತ್ತದೆ. ಈ ಎಲ್ಲಾ ಅನುಭವಗಳು ಧೀರನಿಗೆ ಬರುವ ಕಾರಣ ಈ ವಿಷಯದಲ್ಲಿ ಮೋಹವನ್ನು ಮಾಡುವುದು ಸರ್ವಥಾ ಅಯುಕ್ತ ಎಂಬುದಾಗಿ ಶ್ರೀಕೃಷ್ಣನು ಅರ್ಜುನನಿಗೆ ವಿಶದವಾಗಿ ವಿವರಿಸುತ್ತಾನೆ.

ಶ್ರೀಕೃಷ್ಣನ ಈ ಉಪದೇಶವನ್ನು ಕೇಳಿದ ಅರ್ಜುನನು ಪುನಃ ಈ ರೀತಿಯಾಗಿ ಪ್ರಶ್ನೆ ಮಾಡುತ್ತಾನೆ. ನಿನ್ನ ಉಪದೇಶದ ಪ್ರಕಾರ ಬಂಧುಗಳು ಸತ್ತು ಹೋದರೂ ಅವರ ಆತ್ಮಕ್ಕೆ ನಾಶವಿಲ್ಲ. ಅಷ್ಟೇ ಅಲ್ಲದೆ ಅವರೆಲ್ಲರೂ ಸಜ್ಜನರಾದ್ದರಿಂದ ಅದಕ್ಕಿಂತಲೂ ಉತ್ತಮವಾದ ದೇಹವನ್ನು ಹೊಂದುತ್ತಾರೆ. ಅದ್ದರಿಂದ ನೀನು ದುಃಖಪಡುವುದು ಬೇಡ ಎಂದು ಹೇಳಿದರೂ, ನಮಗೆ ಆ ಬಂಧುಗಳ ದರ್ಶನವಿಲ್ಲದಂತಾಗಿ ಬಹುದುಃಖವನ್ನು ಅನುಭವಿಸಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ನಾನು ಯುದ್ಧಮಾಡಲಾರೆ ಎಂದು ಹೇಳುತ್ತಿರುವುದು ಎಂಬುದಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಇವನ ಬಾಲಿಶವಾದ ಈ ಪ್ರಶ್ನೆಯನ್ನು ಕೇಳಿ ಶ್ರೀಕೃಷ್ಣನು ನಸುನಗುತ್ತಾ ತನ್ನ ಉಪದೇಶವನ್ನು ಮುಂದುವರಿಸುತ್ತಾನೆ. ★

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ**

ಸಾಧನೆಗೊಂದು ಹೆದ್ದಾರಿ

# ಸಮರ್ಪಿಸೋಣ ಹಾಗೂ ಸಂಕಲ್ಪಿಸೋಣ

**ಅನುಗ್ರಹ–ಶ್ರೀವಿದ್ಯಾಧೀಶತೀರ್ಥರು** **ಸಂಗ್ರಹ–ಸಗ್ರಿ**

---

ಅರಗಿನ ಮನೆಯ ದಾಹ ನಡೆಸಿದ ಭೀಮಸೇನ ಯುದಿಷ್ಠಿರಾದಿಗಳನ್ನು ಹೊತ್ತುಕೊಂಡು ಹಿಡಿಂಬವನಕ್ಕೆ ಬರುವನು. ಅಲ್ಲಿ ಹಿಡಿಂಬಿ ತನ್ನನ್ನು ವಿವಾಹ ಮಾಡಿಕೊಳ್ಳಲು ಭೀಮಸೇನನನ್ನು ಒತ್ತಾಯಿಸುವಳು. ಭೀಮಸೇನನಿಗೆ ಒದಗಿದ ಈ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿಯೇ ಎನ್ನುವಂತೆ ಮರುದಿನ ಶ್ರೀವೇದವ್ಯಾಸರು ಅಲ್ಲಿ ಪ್ರತ್ಯಕ್ಷರಾಗುವರು. ಹಿಡಿಂಬಿಯನ್ನು ಮದುವೆಯಾಗಲು ಭೀಮನನ್ನು ಆದೇಶಿಸುವರು. 'ಓಮ್'–ಎಂದು ಶ್ರೀವೇದವ್ಯಾಸರ ಆದೇಶವನ್ನು ಶಿರಸಾವಹಿಸಿದ ಭೀಮಸೇನ ಅದೇ ಸಂದರ್ಭದಲ್ಲಿ ಮತ್ತೊಂದು ವಿಶಿಷ್ಟಸಾಧನೆಯನ್ನು ನಡೆಸಿದನೆಂದು ನಾರಾಯಣಪಂಡಿತಾಚಾರ್ಯರು ತಮ್ಮ ಮಧ್ವವಿಜಯದಲ್ಲಿ (1–33) ಉಲ್ಲೇಖಿಸುವರು–

**ಸಮರ್ಪ್ಯ ಕೃತ್ಯಾನಿ ಕೃತೀ ಕೃತಾನಿ ವ್ಯಾಸಾಯ ಭೂಮ್ನೇ ಸುಕೃತಾನಿ ತಾವತ್ ।**
**ಕರಿಷ್ಯಮಾಣಾನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ ಸ ಶುದ್ಧಬುದ್ಧಿಃ ॥**

ಭೀಮಸೇನ ಅದುವರೆಗೆ ತನ್ನ ಮೂಲಕ ನಡೆದ ದುರ್ಯೋಧನಾದಿಗಳನ್ನು ಆಟಗಳಲ್ಲಿ ಸೋಲಿಸುವುದರಿಂದ ಪ್ರಾರಂಭಿಸಿ ಅರಗಿನ ಮನೆಯನ್ನು ಸುಡುವಲ್ಲಿಯವರೆಗೆ, ಹಿಡಿಂಬಿಯನ್ನು ಸ್ವೀಕರಿಸುವಲ್ಲಿಯವರೆಗೆ ನಡೆದ ಸಾಧನೆಗಳನ್ನೆಲ್ಲ ಕರ್ಮಾಧ್ಯಕ್ಷರಾದ ಶ್ರೀವೇದವ್ಯಾಸರ ಪಾದಾರವಿಂದಕ್ಕೆ ಅರ್ಪಿಸುವನು. ಹಾಗೆಯೇ ಮುಂದೆ ತನ್ನ ಮೂಲಕ ನಡೆಯಲಿರುವ ಬಕಸಂಹಾರವೇ ಮುಂತಾದ ಸಾಧನೆಗಳನ್ನು ಭಗವಂತನ ಪ್ರೀತಿಗಾಗಿ, ಅವನ ಆರಾಧನಾರೂಪದಿಂದ ನಡೆಸುವುದಾಗಿ ಸಂಕಲ್ಪಿಸುವನು.

## ನಾವೂ ಅನುಕರಿಸೋಣ

ಭಾಗವತೋತ್ತಮನಾದ ಭೀಮಸೇನ ನಡೆಸಿದ ಆ ಸಾಧನೆಯನ್ನು ನಾವೂ ನಮ್ಮ ಬದುಕಿನಲ್ಲಿ ಅನುಕರಿಸೋಣ. ಭೀಮಸೇನನಿಗೆ ಶ್ರೀವೇದವ್ಯಾಸರು ಪ್ರತ್ಯಕ್ಷರಾದಂತೆ ನಮಗೆ ದೇವರು ಪ್ರತ್ಯಕ್ಷನಾಗಿ ದೊರಕದಿರಬಹುದು. ಆದರೆ ದೇವರನ್ನು ನಮ್ಮ ಹೃದಯಮಂದಿರಲ್ಲಿ

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ

ವಿಶೇಷವಾಗಿ ಸ್ಥಾಪನೆ ಮಾಡುವ ಸಂದರ್ಭಗಳು ಬದುಕಿನಲ್ಲಿ ಮತ್ತೆ ಮತ್ತೆ ದೊರಕುವವು. ಆ ಎಲ್ಲ ಸಂದರ್ಭಗಳಲ್ಲಿ ತಪ್ಪದೆ ಈ ಸಾಧನೆಯನ್ನು ನಡೆಸೋಣ.

## ಪ್ರತಿನಿತ್ಯ ಬೆಳಿಗ್ಗೆ ಹಾಗೂ ರಾತ್ರಿ

ಪ್ರತಿನಿತ್ಯ ಬೆಳಿಗ್ಗೆ ಎದ್ದಾಕ್ಷಣ **'ಪ್ರಾತಃ ಪ್ರಭೃತಿ ಸಾಯಾಂತಂ..... ತದಸ್ತು ತವ ಪೂಜನಮ್'**– ಎಂದು ದೇವರಲ್ಲಿ ಬೇಡಿಕೊಳ್ಳುವಂತೆ ಹೃದಯದಲ್ಲಿ ದೇವರ ಮಾನಸಿಕ ಪ್ರತಿಮೆಯನ್ನು ಸ್ಥಾಪಿಸಿ ಅಂದು ಇಡೀ ದಿನ ನಡೆಸುವ ಚಟುವಟಿಕೆಗಳನ್ನು 'ನಿನ್ನ ಪೂಜೆಯಾಗಿ ನಿನ್ನ ಪ್ರೀತಿಯ ಉದ್ದೇಶದಿಂದ ನಡೆಸುತ್ತೇನೆ'–ಎಂದು ಸಂಕಲ್ಪಿಸೋಣ. ರಾತ್ರಿ ಮಲಗುವ ಮುನ್ನ ಪುನಃ ಹೃದಯಮಂದಿರದಲ್ಲಿ ಭಗವಂತನ ಮಾನಸಿಕ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಆ ದಿನವಿಡೀ ಮಾಡಿದ ಕರ್ಮಗಳನ್ನೆಲ್ಲ **'.....ತದಸ್ತು ತವ ಪೂಜನಮ್'** ಎಲ್ಲ ನಿನ್ನ ಪ್ರೀತಿಯ ಪ್ರಯೋಜಕಗಳಾಗಿ ನಿನ್ನ ಪೂಜೆ ಎನಿಸುವಂತಾಗಲೆಂದು ಅವನಿಗೆ ಅರ್ಪಿಸೋಣ.

ಬೆಳಿಗ್ಗೆ ರಾತ್ರಿ ಬರೇ ದಿನಕ್ಕೆ ಸಂಬಂಧಿಸದೆ ಸಮಗ್ರ ಸಂಸಾರಾವಸ್ಥೆಗೆ ಸಂಬಂಧಿಸಿದಂತೆ ಸೃಜ್ಯಾವಸ್ಥೆಗೊಳಗಾದ ಆರಂಭದ ಅವಧಿ ಸಮಗ್ರಜೀವನದ ಪ್ರಾತಃ ಕಾಲದಂತೆ ಇದ್ದು, ಅಲ್ಲಿಂದ ಸಂಸಾರಾವಸ್ಥೆಯನ್ನು ಪೂರೈಸಿ ಮೋಕ್ಷಾವಸ್ಥೆಗೆ ಕಾಲಿಡುವ ಅವಧಿ ಬದುಕಿನ ರಾತ್ರಿಯಂತಿದ್ದು ಅಂತಹ ಪ್ರಾತಃಕಾಲದಿಂದ ರಾತ್ರಿಯವರೆಗೆ ನಡೆಸಿದ ಕರ್ಮಗಳ ಅರ್ಪಣವನ್ನೂ , ನಡೆಸಲಿರುವ ಕರ್ಮಗಳ ಸಂಕಲ್ಪವನ್ನೂ ನಡೆಸಬೇಕು. ಬೆಳಿಗ್ಗೆ ಎದ್ದು ಪಠಿಸುವ **'ಪ್ರಾತಃ ಪ್ರಭೃತಿ....'** ಎನ್ನುವ ಪ್ರಾರ್ಥನೆಯ ಹಿನ್ನೆಲೆಯಲ್ಲಿ ಈ ಬಗೆಯ ಅನುಸಂಧಾನವನ್ನೂ ಅಳವಡಿಸಿಕೊಳ್ಳೋಣ.

## ಮಠಮಂದಿರಗಳಲ್ಲಿ

ದೇವರ ವಿಶೇಷ ಸನ್ನಿಧಾನಕ್ಕೆ ಪಾತ್ರಗಳಾದ ಪ್ರತಿಮೆಗಳನ್ನು ಹೊಂದಿರುವ ಮಠಮಂದಿರಗಳಿಗೆ ಹೋದಾಗ, ಆಯಾ ಪ್ರತಿಮೆಯಲ್ಲಿ ಸನ್ನಿಹಿತವಾದ ಭಗವದ್ರೂಪದ ಸಮಕ್ಷಮದಲ್ಲಿ ಅದುವರೆಗೆ ಜೀವನದಲ್ಲಿ ನಡೆದ ಸಾಧನೆಗಳನ್ನೆಲ್ಲ ಉಲ್ಲೇಖಿಸಿ ಅವುಗಳನ್ನು ಸಮರ್ಪಿಸೋಣ. ಹಾಗೆಯೇ ಮುಂದೆ ನಡೆಸಬಹುದಾದ ಸಾಧನೆಗಳನ್ನೂ ಭಗವಂತನ ಆರಾಧನೆಯಾಗಿ ನಡೆಸುವುದಾಗಿ ಸಂಕಲ್ಪಿಸೋಣ.

**ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ**

(

## ಸಂಧಿಕಾಲದ ಅವಧಿಯಲ್ಲಿ

ಅಂತೆಯೇ ಬದುಕಿನ ಅರವತ್ತನೇ ವರ್ಷದಅವಧಿ, ಎಪ್ಪತ್ತನೇ ವರ್ಷದ ಅವಧಿ– ಮುಂತಾದುವನ್ನು ಸಂಧಿಕಾಲ, ಪ್ರಾರಬ್ಧಕರ್ಮ ಒಂದು ಹಂತದಲ್ಲಿ ಪರಿಪಕ್ವಾವಸ್ಥೆಗೊಳಗಾಗಿ ವಿಶೇಷಫಲ ನೀಡುವ ಗಡು–ಎಂದು ಪರಿಗಣಿಸಲಾಗುವುದು. ಅಂತಹ ಸಂಧಿಕಾಲದ ಅವಧಿಗಳಲ್ಲೂ ಅದುವರೆಗೆ ಜೀವನದಲ್ಲಿ ನಡೆದ ಸಾಧನೆಗಳ ಸಮರ್ಪಣೆಯನ್ನೂ ಮುಂದಿನ ಸಾಧನೆಗಳ ಸಂಕಲ್ಪವನ್ನೂ ನಡೆಸೋಣ. ಕರ್ಮಾಧ್ಯಕ್ಷ ನರಸಿಂಹಾಭಿನ್ನನಾದ ಅಂತರ್ಯಾಮಿ ಭಗವದ್ರೂಪವನ್ನು ವಿಶೇಷವಾಗಿ ಹೃದಯಮಂದಿರದಲ್ಲಿ ಧ್ಯಾನಿಸಿ, ಅವನ ಪಾದಾರವಿಂದದಲ್ಲಿ ಸಾಧನೆಗಳ ಸಮರ್ಪಣೆ ಸಂಕಲ್ಪಗಳನ್ನು ನಡೆಸೋಣ.

## ದುಸ್ಸಾಧನೆಗಳ ಅರ್ಪಣೆ ಸಂಕಲ್ಪಗಳು ಹೇಗೆ?

ಸತ್ ಸಾಧನೆಗಳ ಜೊತೆಗೆ ಜೀವನದಲ್ಲಿ ನಮ್ಮಿಂದ ಎಸಗಲ್ಪಟ್ಟ ದುಸ್ಸಾಧನೆಗಳ ಸಮರ್ಪಣೆಯನ್ನು ಮರೆಯದಿರೋಣ. ಮುಂದೆ ಸಂಭವಿಸಲಿರುವ ದುಸ್ಸಾಧನೆಗಳ ಕುರಿತು ಸಂಕಲ್ಪಕ್ಕೂ ಮರೆಯದಿರೋಣ. ಆದರೆ ದುಸ್ಸಾಧನೆಗಳಿಗೆ ಸಂಬಂಧಿಸುವ ಸಮರ್ಪಣೆಯ ಹಾಗೂ ಸಂಕಲ್ಪದ ಅನುಸಂಧಾನ ಮಾತ್ರ ಬೇರೆ. ಪಶ್ಚಾತ್ತಾಪರೂಪದಲ್ಲಿ ನಡೆಯಬೇಕಾದ ದುಸ್ಸಾಧನೆಗಳ ಸಮರ್ಪಣೆಯ ಅನುಸಂಧಾನ ನಮ್ಮಿಂದ ಆ ಬಗೆಯ ದುಸ್ಸಾಧನೆ ಎಸಗಲ್ಪಡಲು ಮೂಲಪ್ರೇರಕ ಭಗವಂತನೇ. ನಮ್ಮ ಪ್ರಾರಬ್ಧಕರ್ಮಕ್ಕನುಗುಣವಾಗಿ ಕಾಮ ಮುಂತಾದ ದೋಷಗಳಿಗೆ ಅವಾಂತರ ಅಭಿಮಾನಿಗಳಾದ ಕಾಲನೇಮಿ ಮುಂತಾದ ಅಸುರರ ಮಾಧ್ಯಮದಲ್ಲಿ ಭಗವಂತ ನಮ್ಮಿಂದ ಅಂತಹ ದುಸ್ಸಾಧನೆ ಎಸಗಲ್ಪಡುವಂತೆ ಮಾಡಿರುವನೆಂದು ಅವುಗಳ ದುಃಸ್ಸಾಧನತ್ವವನ್ನೂ, ಅವುಗಳ ನಿರ್ವಹಣೆಯಲ್ಲಿ ಆಸುರೀಶಕ್ತ್ಯಾದಿಗಳ ಪಾತ್ರವನ್ನೂ ಚೆನ್ನಾಗಿ ವಿವೇಚಿಸಿಕೊಂಡು ತನ್ನ ಮಾಧ್ಯಮದಲ್ಲಿ ನಡೆದ ಆ ಕೃತ್ಯಗಳ ಬಗ್ಗೆ ಪಶ್ಚಾತ್ತಾಪಕ್ಕೆ ಒಳಗಾಗಬೇಕು. ಭಗವಂತನ ಪಾತ್ರದ ವಿವೇಚನಾಪೂರ್ವಕವಾಗಿ ನಡೆದ ಈ ಬಗೆಯ ಪಶ್ಚಾತ್ತಾಪ ಸಮರ್ಪಣೆಯ ಮೆರುಗನ್ನು ಪಡೆಯಬಲ್ಲದು. ಇನ್ನು ಮುಂದೆ ಅಪರಾಧಗಳು ಎಸಗಲ್ಪಡದಂತಾಗಲಿ, ಒಂದೊಮ್ಮೆ ಪ್ರಾರಬ್ಧಕರ್ಮಕ್ಕನುಗುಣವಾಗಿ ಅಪರಾಧ ಎಸಗಲ್ಪಟ್ಟದ್ದೇ ಆದರೂ ಅದರ ಅಪರಾಧತ್ವವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಲು ಬೇಕಾದ ಹೃದಯವಂತಿಕೆಯನ್ನೂ, ಆ ಅಪರಾಧದ ಬಗ್ಗೆ ಪಶ್ಚಾತ್ತಾಪ ತಾಳಲು ಬೇಕಾದ ಪ್ರಜ್ಞಾವಂತಿಕೆಯನ್ನೂ ನೀಡುವಂತೆ ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುವುದೇ ಜೀವನದಲ್ಲಿ

**ಇದು ಬರಿಯ ಮಾತಲ್ಲ. ಅನುಭಾವಿಗಳ ಅನುಭವದ ಮಾತು**

ಮುಂದೆ ಎಸಗಲ್ಪಡಲಿರುವ ಅಪರಾಧಗಳ ಕುರಿತಾದ ಸಂಕಲ್ಪ. ವಿವೇಚನಾಪೂರ್ವಕವಾದ ಪ್ರಾರ್ಥನೆ ಭಗವತ್‌ಪ್ರಜ್ಞೆಗೆ ಪೋಷಕವಾಗಿ ಸಂಕಲ್ಪದ ಮೆರುಗನ್ನು ಪಡೆಯಬಲ್ಲದು.

ಹೀಗೆ ಸತ್ಸಾಧನೆಗಳ ಕುರಿತು ಹೇಗೋ ಹಾಗೆಯೇ ದುಸ್ಸಾಧನೆಗಳ ಕುರಿತೂ ಸಮರ್ಪಣೆ ಹಾಗೂ ಸಂಕಲ್ಪ ಇವುಗಳನ್ನು ತಪ್ಪದೆ ನಡೆಸೋಣ.

## ತ ಏವಾತ್ಮವಿನಾಶಾಯ ಕಲ್ಪಂತೇ

ಈ ರೀತಿಯಾಗಿ ಕರ್ಮಗಳ ವಿಷಯದಲ್ಲಿ ಸಂಕಲ್ಪವನ್ನೂ ಕೃಷ್ಣಾರ್ಪಣವನ್ನೂ ಕೈಗೊಂಡದ್ದರಿಂದ ಕರ್ಮಗಳಿಗೆ ಒಂದು ಬಗೆಯ ಪರಿಷ್ಕಾರ ದೊರಕಿದಂತಾಗುವುದು. ನಾರದರು ಇದನ್ನು ಔಷಧದ ದೃಷ್ಟಾಂತ ಕೊಟ್ಟು ಹೀಗೆ ಸಮರ್ಥಿಸಿರುವರು

**ಅಮಯೋಽಯಂ ಚ ಭೂತಾನಾಂ ಜಾಯತೇ ಯೇನ ಸುವ್ರತ ।**
**ತದೇವ ಹ್ಯಾಮಯದ್ರವ್ಯಂ ತತ್ ಪುನಾತಿ ಚಿಕಿತ್ಸಿತಮ್ ।**
**ಏವಂ ನೃಣಾಂ ಕ್ರಿಯಾಯೋಗಾಃ ಸರ್ವೇ ಸಂಸೃತಿಹೇತವಃ ।**
**ತ ಏವಾತ್ಮವಿನಾಶಾಯ ಕಲ್ಪಂತೇ ಕಲ್ಪಿತಾಃ ಪರೇ**

–ಭಾಗ 1–5–33,34

ಯಾವ ಆಹಾರದ್ರವ್ಯ ರೋಗಗಳಿಗೆ ಕಾರಣವಾಗುವುದೋ ಅದೇ ಆಹಾರದ್ರವ್ಯ ಔಷಧದ ಪರಿಷ್ಕಾರಕ್ಕೊಳಪಡಿಸಿದಾಗ ಔಷಧರೂಪವನ್ನು ತಾಳಿ ರೋಗದ ಉಪಶಮನಕ್ಕೆ ಕಾರಣವಾಗುವುದು. ಹಾಗೆಯೇ **'ಕರ್ಮಣಾ ಬಧ್ಯತೇ ಜಂತುಃ.....'** ಎಂದು ತಿಳಿಸಿರುವಂತೆ ಸಂಸಾರ ಬಂಧನಕ್ಕೆ ಪ್ರಯೋಜಕಗಳಾಗಿರುವ ಕರ್ಮಗಳೇ ಪರಿಷ್ಕಾರವೊಂದಕ್ಕೊಳಪಡಿಸಿದಾಗ ಸಂಸಾರಾವಸ್ಥೆಗೆ ಕಾರಣವಾದ ಲಿಂಗದೇಹದ ನಾಶಕ್ಕೆ ಅರ್ಥಾತ್ ಸಂಸಾರಬಂಧನದ ಪರಿಹಾರಕ್ಕೆ ಪ್ರಯೋಜಕಗಳಾಗಬಲ್ಲವು. ಆ ಪರಿಷ್ಕಾರ–ಕರ್ಮಾಧ್ಯಕ್ಷನಾದ ಭಗವಂತನಿಗೆ ಕರ್ಮಗಳನ್ನು ಸಮರ್ಪಿಸುವುದು. ಕರ್ಮಗಳಿಗೆ ಅವನ ನಂಟು ದೊರಕುವಂತೆ ಸಂಕಲ್ಪಿಸುವುದು.

ಹೀಗೆ ಸಂಕಲ್ಪ ಮತ್ತು ಸಮರ್ಪಣೆಗಳ ಸಂಸ್ಕಾರಕ್ಕೊಳಪಡಿಸಿದಾಗ ಬಂಧಕಗಳೆನಿಸುವ ಕರ್ಮಗಳು ಮೋಚಕಗಳಾಗಿ ಪರಿವರ್ತಿತಗಳಾಗಬಲ್ಲವು. ಆದುದರಿಂದ ಫಲದ ದೃಷ್ಟಿಯಿಂದಲೂ ಕರ್ಮಗಳ ಸಂಕಲ್ಪ ಹಾಗೂ ಸಮರ್ಪಣೆಗಳಿಗೆ ತುಂಬ ಮಹತ್ತ್ವವಿದೆ ಎಂಬುದನ್ನೂ ವಿವೇಚಿಸಿಕೊಳ್ಳೋಣ. ★

**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ**

ಭಾರತಭಾವದರ್ಪಣ

ಭಾಗ: 12

# ದಣಿದ ಧಣಿ–ಮುನಿಯದ ಮುನಿ

–ವಿ|| ರಾಮವಿಟ್ಠಲಾಚಾರ್ಯ ಬೆಂಗಳೂರು

ಜನಮೇಜಯರಿಗೆ ತನ್ನ ತಂದೆ ಪರೀಕ್ಷಿತರ ಮರಣದ ಬಗ್ಗೆ ಕುತೂಹಲ. ಮಂತ್ರಿಗಳನ್ನು ಕೇಳಿದ ನನ್ನ ತಂದೆಯ ವ್ಯಕ್ತಿತ್ವ ಮತ್ತು ಅವರ ಅವಸಾನದ ರೀತಿಯನ್ನು ತಿಳಿಸಿರಿ. ಕುತೂಹಲಿಗಳಾದ ಶೌನಕರಿಗೆ ಸೌತಿಗಳೂ ಅದನ್ನು ವಿವರಿಸಿ ಹೇಳಿದರು.

ಪರೀಕ್ಷಿತ್‌ರಾಜರು ಪರಮೋದಾರಿಗಳು. ಪರಮಧಾರ್ಮಿಕರು. ಉತ್ತಮ ಆಡಳಿತ ನಡೆಸಿದ ಸಾತ್ವಿಕರು. ಅವರೊಮ್ಮೆ ಬೇಟೆಗೆಂದು ತೆರಳಿದರು. ಅನೇಕ ಕ್ರೂರವನ್ಯಮೃಗಗಳನ್ನು ಕೊಲ್ಲುತ್ತ ಸಾಗಿ ಬಂದವರು ಮೃಗವೊಂದಕ್ಕೆ ಬಾಣಪ್ರಯೋಗಿಸಿದರು. ಪೃಷ್ಠದಲ್ಲಿ ಬಾಣವಿದ್ಧವಾದ ಆ ಮೃಗ ಹಾಗೆ ಕಾಡಿನಲ್ಲಿ ಓಡಿ ಓಡಿ ಕಣ್ಮರೆಯಾಯಿತು. ಅದನ್ನು ಬೆನ್ನಟ್ಟಿ ಬಂದ ಅರವತ್ತು ವರ್ಷದ ಪರೀಕ್ಷಿತನಿಗೆ ದಣಿವಾಯಿತು. ಬಾಯಾರಿದ. ಬೇಟೆ ತಪ್ಪಿತಲ್ಲ ಎನ್ನುವ ಕೊರಗು. ಹಸಿವೆ ಬಾಯಾರಿಕೆಯ ಬಳಲಿಕೆಗೊಳಗಾದ ಪರೀಕ್ಷಿತನು ಕಾಡಿನ ಶಾಂತಪರಿಸರದಲ್ಲಿ ಕಂಡ ಶಮೀಕಋಷಿಗಳ ಆಶ್ರಮಕ್ಕೆ ನುಗ್ಗಿದ. ದಣಿದ ಧಣಿ ನೀರು ಕೇಳಿದ. ಓಡಿ ಬಂದ ಮೃಗವನ್ನು ಕಂಡಿರಾ ಎಂದು ಕೇಳಿದ. ಮುನಿ ಶಾಂತರಸದ ಸಮಾಧಿಯಲ್ಲಿ ಮಗ್ನರಾಗಿದ್ದರು. ಬಾಹ್ಯದ ಎಚ್ಚರಿಕೆಯಿಲ್ಲದ ಮುನಿಯಮೌನ ಬಳಲಿದ ರಾಜನನ್ನು ಕೆರಳಿಸಿತು. ತನ್ನ ಕೋಪದ ಪ್ರತೀಕಾರವಾಗಿ ಅಲ್ಲಿಯೇ ಬಿದ್ದಿದ್ದ ಸರ್ಪದ ಶವವನ್ನು ಬಿಲ್ಲಿನ ತುದಿಯಿಂದ ಎತ್ತಿ ಮುನಿಯ ಕೊರಳಿಗೆ ಹಾಕಿದ. ಮುನಿ ಮುನಿಯಲಿಲ್ಲ. ರಾಜ ಹಿಂತಿರುಗಿದ.

ಜೊತೆ ಬಾಲಕರ ಜೊತೆಯಲ್ಲಿ ಆಡುತ್ತಿದ್ದ ಶಮೀಕ ಪುತ್ರ ಶೃಂಗಿಯನ್ನು ಮತ್ತೊಬ್ಬ ಋಷಿಪುತ್ರ ಕೃಶನು ಆಟದ ನಡುವೆ ಪರಿಹಾಸ ಮಾಡಿದ. ಶೃಂಗಿ! ನಿನ್ನದೇನು ಗರ್ವ? ತೇಜಸ್ವಿ ಹಾಗೂ ತಪಸ್ವಿಗಳಾದ ನಿನ್ನ ತಂದೆಯನ್ನು ರಾಜಮೃತಸರ್ಪವನ್ನು ಕೊರಳಿಗೆ ಹಾಕಿ ಅವಮಾನಿಸಿದ್ದಾನೆ! ನಮ್ಮಂತಹ ಬಲ್ಲವರ ಮುಂದೆ ನಿನ್ನದೇನು ಹಮ್ಮು? ಕುಸಿದ ಶೃಂಗೀ ಮತ್ತೆ ಕೇಳಿದ. ಅನನ್ಯಚಿತ್ತರಾಗಿ ಸದಾ ವಿಷ್ಣುವಿನ ಆರಾಧನೆಯಲ್ಲಿ ತೊಡಗಿರುವ ವನ್ಯಫಲ ಕಂದಮೂಲ ಫಲಗಳನ್ನು ತಿಂದುಕೊಂಡು ಮೌನವ್ರತದಲ್ಲಿರುವ ತನ್ನ ತಂದೆಗೆ ಅಂತಹ ಅಪಮಾನ ಹೇಗಾಯ್ತು? ಕಿವಿಯರಳಿಸಿ ಕೇಳಿದ ಶೃಂಗೀ. ನಡೆದ ಎಲ್ಲ ವೃತ್ತಾಂತವನ್ನು

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು

ಕೃಶ ಅರುಹಿದ. ಅದನ್ನು ಕೇಳಿ ಕನಲಿ ಕೆಂಡವಾದ. ಮುನಿಕುಮಾರ ಶೃಂಗಿ ಹೇಳಿದ–ಕೈ ಮುಗಿದು ಆದೇಶಕ್ಕಾಗಿ ಕಾದು ದೂರನಿಲ್ಲಬೇಕಾಗಿದ್ದ ರಾಜಾ ಪರೀಕ್ಷಿತನು ಅನುಮತಿಯಿಲ್ಲದೆ ಒಳಗೆ ನುಗ್ಗಿ ಮುನಿಗಳಿಗೆ ಅಪಮಾನ ಮಾಡಿದನೆ? ಇಂದಿನಿಂದ ಏಳನೇ ದಿವಸದಂದು ಸರ್ಪ ತಕ್ಷಕನಿಂದ ರಾಜ ಮರಣ ಹೊಂದಲಿ. ಹೀಗೆ ಶಪಿಸಿ ಕುಟೀರಕ್ಕೆ ಬಂದ ಶೃಂಗಿಗೆ ಶಮೀಕರನ್ನು ಅವರ ಕೊರಳಿದ್ದ ಸರ್ಪಶವವನ್ನು ನೋಡಿ ದುಃಖ ಉಮ್ಮಳಿಸಿತು. ರೋದನ ಮಾಡಿದ. ಇವನ ಆಕ್ರೋಶ ಮುನಿಯ ಏಕಾಗ್ರತೆಗೆ ಭಂಗ ತಂದಿತು.

ಕಣ್ತೆರದ ಮುನಿಗಳು ಸ್ವಲ್ಪವೂ ಮುನಿಯದೆ ಕೊರಳ ಸರ್ಪವನ್ನು ನೆಲಕ್ಕೆ ಹಾಕಿ ಯಾಕೆ ಈ ಅಳು? ಎಂದು ವಿಚಾರಿಸಿದರು. ಶೃಂಗಿ ರಾಜನ ದುರ್ವರ್ತನೆಯನ್ನು ತಿಳಿಸಿ ತಾನು ಕೊಟ್ಟ ಶಾಪ ವೃತ್ತಾಂತವನ್ನೂ ನಿವೇದಿಸಿದ.

ಮಗನ ದುಡುಕಿನ ವರ್ತನೆಯನ್ನು ಕೇಳಿ ಅಸಮಾಧಾನಗೊಂಡ ಶಮೀಕರು ನುಡಿದರು. ನಿನ್ನ ನಡವಳಿಕೆ ನನಗೆ ಪ್ರಿಯವೆನಿಸಲಿಲ್ಲ. ಇದು ತಪಸ್ವಿಗಳಿಗೆ ಧರ್ಮವಲ್ಲ. ನಾವು ಆ ರಾಜನ ದೇಶದಲ್ಲಿ ಆಶ್ರಯದಲ್ಲಿ ಇರುವವರು. ನ್ಯಾಯವಾಗಿ ಅವನು ರಕ್ಷಣೆ ಮಾಡುತ್ತಿದ್ದಾನೆ. ನಮಗೆ ಆಸರೆಯಾದವರು ತಪ್ಪಿ ನಡೆದರೂ ನಾವು ಸಹನೆಯಿಂದಿರಬೇಕು. ಧಾರ್ಮಿಕನಾದ ರಾಜ ನಮ್ಮ ರಕ್ಷಣೆಗೆ ಮುಂದಿರದಿದ್ದರೆ ನಾವು ತಪಸ್ಸು, ಧರ್ಮಗಳನ್ನು ಆಚರಿಸಲಾದೀತೆ? ದೇಶ ಅರಾಜಕವಾದರೆ ನಾನಾ ದೋಷಗಳು ಸಂಭವಿಸುವವು. ದುಷ್ಟರು ದಂಗೆ ಏಳುತ್ತಾರೆ. ರಾಜನ ದಂಡನೆಯ ಭಯದಿಂದ ದುಷ್ಟರ ದುರ್ವರ್ತನೆ ಅಡಗಿ ಶಾಂತಿ ಸ್ಥಾಪನೆಯಾಗುವುದು. ಭಯದ ವಾತಾವರಣದಲ್ಲಿ ಯಾವ ಧರ್ಮವನ್ನೂ ಆಚರಿಸಲಾಗುವುದಿಲ್ಲ. ರಾಜನಿಂದ ಧರ್ಮ. ಧರ್ಮದಿಂದ ಸ್ವರ್ಗ. ರಾಜನಿಂದ ಯಜ್ಞ, ಯಜ್ಞದಿಂದ ದೇವತೆಗಳಿಗೆ ತೃಪ್ತಿ. ತೃಪ್ತರಾದ ದೇವತೆಗಳಿಂದ ವೃಷ್ಟಿ. ವೃಷ್ಟಿಯಿಂದ ಧಾನ್ಯ. ಧಾನ್ಯದಿಂದ ಮನುಷ್ಯರ ತೃಪ್ತಿ. ಹೀಗಿರುವಾಗ ಅಂತಹ ರಾಜನಿಗೆ ಮರಣ ಶಾಪವಿತ್ತೆಯಲ್ಲ? ಹತ್ತು ಶ್ರೋತ್ರಿಯರಿಗೆ ಒಬ್ಬ ರಾಜ ಸಮನೆಂದು ಮನುಗಳ ಮಾತು. ಅವನ ಅಪರಾಧ ಹಸಿವೆ ಬಾಯಾರಿಕೆಯ ಬಳಲಿಕೆಯಲ್ಲಿ ನಡೆದದ್ದು. ನಿನ್ನದು ಅವಿವೇಕದ ಹುಡುಗಾಟಿಕೆಯ ಉದ್ಧಟತನ!

ಅಪ್ಪ ಮನ್ನಿಸಿ. ನನ್ನ ನಡತೆ ನಿಮಗೆ ಪ್ರಿಯವೋ ಅಪ್ರಿಯವೋ? ಶಾಪ ಕೊಟ್ಟಾಯಿತು. ಮಾತು ಸುಳ್ಳಾಗದು. ತಮಾಷೆಗೂ ಸುಳ್ಳಾಡಿದವನಲ್ಲ ನಾನು ಶೃಂಗಿ ಹೇಳಿದ.

ಶಮಿಕರು ನುಡಿದರು–ಕೇಳು ಶೃಂಗಿ! ಮಗನಿಗೆ ಎಷ್ಟೇ ವಯಸ್ಸಾಗಿರಲಿ. ಅವನ

**ಪ್ರಾಣಿಹಿಂಸೆ ಮಾಡಬೇಡಿ**

ಹಿತೈಷಿಯಾದ ತಂದೆ ಅವನಿಗೆ ಸಮಯದಲ್ಲಿ ಬುದ್ಧಿ ಹೇಳಲೇಬೇಕು. ಹಾಗಿರುವಾಗ ತಪಸ್ವೀ ಬಾಲಕನಾದ ನಿನಗೆ ನಾನು ಬುದ್ಧಿ ಹೇಳುವುದು ತಪ್ಪಲ್ಲ. ತಪಸ್ವಿಗಳ ಕೋಪದಿಂದ ಲೋಕಕ್ಕೆ ಹಾನಿಯಾಗುತ್ತದೆ. ನೀನು ಶಾಂತಿಯನ್ನು ಅಭ್ಯಾಸಮಾಡಿಕೋ. ಕ್ರೋಧವನ್ನು ಬಿಡು. ಕಷ್ಟಪಟ್ಟು ಗಳಿಸಿದ ತಪಸ್ಸಿನ ಪುಣ್ಯವನ್ನೆಲ್ಲ ಕೋಪ ಭಸ್ಮಗೊಳಿಸುತ್ತದೆ. ಸಾಧಕನಿಗೆ ಕ್ಷಮೆಯೇ ಭೂಷಣ. ಕ್ಷಮಾಶೀಲನಾದವನಿಗೆ ಐಹಿಕ ಪಾರತ್ರಿಕ ಸೌಖ್ಯ. ಕೋಪದಿಂದ ನೀನು ಮಾಡಿದ್ದಾಯಿತು. ನಾನು ಶಮದಿಂದ ಮುಂದಿನ ಹೆಜ್ಜೆ ಇಡುತ್ತೇನೆ. ಶಿಷ್ಯ ಗೌರಮುಖನಿಂದ ಪರೀಕ್ಷಿತನಿಗೆ ಶಾಪದ ವಿಚಾರ ತಿಳಿಸಿ ರಕ್ಷಣೆಯ ಮಾರ್ಗ ಹಿಡಿಯುವಂತೆ ಸೂಚಿಸುತ್ತೇನೆ. ಗೌರಮುಖನು ರಾಜಭವನಕ್ಕೆ ಬಂದು ಶಮೀಕರ ಸಂದೇಶ ತಿಳಿಸಿದ.

ಶಮೀಕರು ಧ್ಯಾನಸ್ಥರಾಗಿ ಮೌನಿಗಳಾಗಿದ್ದ ಸುದ್ದಿ ಕೇಳಿ ರಾಜ ಪರಿತಪಿಸಿದ. ತಕ್ಷಕನಿಂದ ಮರಣದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ತನ್ನಿಂದ ಮಹಾತ್ಮರಿಗೆ ಆದ ಅಪಚಾರದ ಬಗ್ಗೆ ಪರಿತಪಿಸಿದ. ಇನ್ನಾದರೂ ಅನುಗ್ರಹಿಸುವಂತೆ ಹೇಳಿ ಕಳುಹಿಸಿದ.

ಇತ್ತ ಮಂತ್ರಿಗಳೊಡನೆ ಮಂತ್ರಾಲೋಚನೆ ನಡೆಸಿ ಒಂದು ಕಂಬದ ಮೇಲೆ ಭವನ ನಿರ್ಮಾಣಗೈದ. ವೈದ್ಯರ ತಂಡ, ಔಷಧಗಳ ವ್ಯವಸ್ಥೆಯನ್ನೆಲ್ಲ ಮಾಡಿಸಿದ. ಮಂತ್ರಸಿದ್ಧಿ ಪಡೆದ ಬ್ರಾಹ್ಮಣರನ್ನು ಅಲ್ಲಿರಿಸಿಕೊಂಡ. ಅಲ್ಲಿದ್ದುಕೊಂಡೇ ರಾಜಕಾರ್ಯವನ್ನು ನಿಭಾಯಿಸಿದ. ಏಳನೇ ದಿವಸ ಬಂತು. ರಾಜನನ್ನು ತಕ್ಷಕನ ವಿಷಯದಿಂದ ಪಾರುಮಾಡಲು ಕಾಶ್ಯಪಬ್ರಾಹ್ಮಣ ತ್ವರೆಯಿಂದ ಧಾವಿಸಿ ಬರುತ್ತಿದ್ದ. ಬ್ರಾಹ್ಮಣ ವೇಷದ ತಕ್ಷಕ ಅವನನ್ನು ವಿಚಾರಿಸಿ ವಿಷಯ ತಿಳಿದ. ಬ್ರಾಹ್ಮಣ ! ನಾನೇ ತಕ್ಷಕ. ರಾಜನನ್ನು ಕಚ್ಚುತ್ತೇನೆ. ನಿನ್ನಿಂದ ಅವನನ್ನು ಚಿಕಿತ್ಸೆಗೊಳಿಸಲು ಸಾಧ್ಯವಿಲ್ಲ ಎಂದ ತಕ್ಷಕ.

ನಾನು ನನ್ನ ವಿದ್ಯಾಬಲದಿಂದ ರಾಜನನ್ನು ಬದುಕಿಸುತ್ತೇನೆಂದ. ವಿಪ್ರನ ಮಾತು ಕೇಳಿ ಅವನ ವಿದ್ಯಾಬಲವನ್ನು ಪರೀಕ್ಷಿಸಲು ಹತ್ತಿರದ ನ್ಯಗ್ರೋಧವೃಕ್ಷವನ್ನು ತನ್ನ ವಿಷಜ್ವಾಲೆಯಿಂದ ಸುಟ್ಟು ಹಾಕಿದ ತಕ್ಷಕ. ವಿಪ್ರ ತನ್ನ ಚಿಕಿತ್ಸೆಯಿಂದ ಮರದ ಬೂದಿಯನ್ನು ರಾಶಿ ಮಾಡಿ ಅದು ಮತ್ತೆ ಮೊಳೆತು ಚಿಗುರೊಡೆಯುವಂತೆ ಮಾಡಿದ. ವಿಪ್ರ! ನಿನ್ನ ವಿದ್ಯಾಬಲ ಅತ್ಯದ್ಭುತವಾಗಿದೆ. ರಾಜನನ್ನು ಬದುಕಿಸುವ ನಿನ್ನ ಉದ್ದೇಶವೇನು? ಹಣದ ಆಸೆಯಿಂದ ಹೊರಟಿದ್ದೇನೆಂದ ವಿಪ್ರ. ರಾಜ ಕೊಡಬಹುದಾದ ಹಣಕ್ಕಿಂತಲೂ ಹೆಚ್ಚಿನ ಹಣವನ್ನು ನಾನೇ ಕೊಡುತ್ತೇನೆ. ಹಿಂತಿರುಗು. ವಿಪ್ರಶಾಪದಿಂದ ರಾಜನ ಮರಣ ನಿಶ್ಚಯವಾಗಿದೆ. ನಿನ್ನ ಮಂತ್ರ ಅಲ್ಲಿ ವಿಫಲವಾದರೆ ಸುಮ್ಮನೆ ಅಪಖ್ಯಾತಿ. ಹೀಗೆಯೇ ಹೋಗು ಎಂದ.

**ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ**

ಬ್ರಾಹ್ಮಣ ತೆರಳಿದ ಮೇಲೆ ಹಸ್ತಿನಪುರಕ್ಕೆ ಬಂದ ತಕ್ಷಕನಿಗೆ ರಾಜನ ರಕ್ಷಣಾವ್ಯವಸ್ಥೆ ತಿಳಿಯಿತು. ತಕ್ಷಕ ಸಂಚು ರೂಪಿಸಿದ. ತನ್ನ ನಾಗಗಳಿಗೆ ತಾಪಸರೂಪದಿಂದ ರಾಜನ ಬಳಿಗೆ ಹೋಗಿ ಫಲಪತ್ರ ಉದಕಗಳನ್ನು ರಾಜನಿಗೆ ಕೊಡುವಂತೆ ಆದೇಶಿಸಿದ. ಅದರಂತೆ ಅವರು ಮುನಿವೇಷದಲ್ಲಿ ದರ್ಭೆ ನೀರು ಹಣ್ಣುಗಳನ್ನು ಹಿಡಿದುಕೊಂಡು ಹೋಗಿ ರಾಜನಿಗೆ ತಲುಪಿಸಿದರು. ರಾಜ ಎಲ್ಲ ಮಂತ್ರಿಗಳಿಗೆ, ಬನ್ನಿ ತಾಪಸರು ನೀಡಿರುವ ಸ್ವಾದುಫಲಗಳನ್ನು ಸವಿಯೋಣ ಎಂದು ಆಹ್ವಾನವಿತ್ತ.

ದೈವಸಂಕಲ್ಪದಂತೆ ತಕ್ಷಕ ಕ್ರಿಮಿರೂಪದಿಂದ ಸೇರಿದ ಹಣ್ಣನ್ನೇ ರಾಜ ತಿನ್ನಲು ತೆಗೆದುಕೊಂಡ. ಅವನು ಹಣ್ಣು ತಿನ್ನುತ್ತಿರುವಾಗ ಕೆಂಪು ಬಣ್ಣದ ಕಪ್ಪು ಕಣ್ಣಿನ ಕುಳ್ಳ ಕ್ರಿಮಿರೂಪದಿಂದ ತಕ್ಷಕ ಹೊರ ಹೊಮ್ಮಿದ. ರಾಜ ಆ ಕ್ರಿಮಿಯನ್ನು ನೋಡುತ್ತ ನುಡಿದ. ಮಂತ್ರಿಗಳೇ! ಅದೋ ಏಳನೇ ದಿವಸದ ಸೂರ್ಯ ಮುಳುಗುತ್ತಿದ್ದಾನೆ. ಇದೋ ತಕ್ಷಕ ಕ್ರಿಮಿರೂಪದಿಂದ ಬಂದಿದ್ದಾನೆ. ಮುನಿಶಾಪ ಸತ್ಯವಾಗುತ್ತಿದೆ. ನಾನು ಮರಣಕ್ಕೆ ಅಂಜುವುದಿಲ್ಲ. ತಕ್ಷಕ ಸಾಯಿಸಲಿ ಎಂದ. ಅವನ ರಕ್ಷಣೆಗೆ ಇದ್ದ ಮಂತ್ರಿಗಳೆಲ್ಲ ಕಾಲನ ಪ್ರೇರಣೆಗೆ ಒಳಪಟ್ಟು ಗರಬಡಿದವರಂತೆ ಸುಮ್ಮನೆ ನೋಡುತ್ತ ನಿಂತರು. ತಡೆಯಲಿಲ್ಲ. ತಕ್ಷಕನನ್ನು ನೋಡಿ ರಾಜ ನಕ್ಕಿದ. ಆ ಕ್ರಿಮಿ ತಕ್ಷಕಸರ್ಪವೇಷತೊಟ್ಟು ರಾಜನನ್ನು ಸುತ್ತಿ ಮಹಾಶಬ್ದ ಮಾಡಿ ಕಚ್ಚಿ ಸಾಯಿಸಿತು. ಮಂತ್ರಿಗಳು ರಾಜನ ಸಾವನ್ನು ಕಂಡು ನಿರುತ್ತರರಾಗಿ ಹಾವಿಗೆ ಹೆದರಿ ಓಡಿದರು. ವಿಷದ ಜ್ವಾಲೆಯಿಂದ ರಾಜನಿದ್ದ ಆ ಮನೆಯೇ ಉರಿದು ಬೂದಿಯಾಯಿತು. ಕೆಲಸ ಸಾಧಿಸಿ ಗಗನ ಮಾರ್ಗವಾಗಿ ಹೋಗುತ್ತಿರುವ ತಕ್ಷಕರನ್ನು ಕಂಡು ಎಲ್ಲರೂ ಅಚ್ಚರಿಗೊಂಡರು. ರಾಜನ ಉತ್ತರಕ್ರಿಯಾಕಲಾಪಗಳು ಮುಗಿದ ಬಳಿಕ ಪುತ್ರ ಜನಮೇಜಯನಿಗೆ ಪಟ್ಟಾಭಿಷೇಕ ಮಾಡಿದರು. ಕಾಲಕ್ರಮದಲ್ಲಿ ಕಾಶಿರಾಜ ಸುವರ್ಣವರ್ಮನ ಮಗಳಾದ ವಪುಷ್ಟಮೆಯನ್ನು ತಂದು ರಾಜನಿಗೆ ಮದುವೆ ಮಾಡಿದರು. ಪತಿವ್ರತೆ ವಪುಷ್ಟಮೆ ರಾಜನೊಂದಿಗೆ ವಿಹರಿಸಿ ಸಂತಸಪಟ್ಟಳು.

ತನ್ನ ತಂದೆ ಪರೀಕ್ಷಿತ ತಕ್ಷಕನಿಂದ ಮರಣ ಹೊಂದಿದ ಕತೆಯನ್ನು ಮಂತ್ರಿಗಳಿಂದ ಕೇಳಿದ ಜನಮೇಜಯ ವಿಷವೈದ್ಯ ಕಾಶ್ಯಪನಿಗೆ ತಕ್ಷಕನು ಹಣಕೊಟ್ಟು ಅರ್ಧರಾತ್ರಿಯಲ್ಲಿಯೇ ಹಿಂತಿರುಗಿಸಿದ ಸುದ್ದಿ ನಿಮಗೆ ಹೇಗೆ ತಿಳಿಯಿತು? ಯಾರು ಸಾಕ್ಷಿ? ಎಂದು ಕೇಳಿದ.

ಮಂತ್ರಿಗಳು ಹೇಳಿದರು–ಕಾಶ್ಯಪ ಹಾಗೂ ತಕ್ಷಕರು ಬರುವ ಮುಂಚೆಯೇ ಒಣ

(37ನೇ ಪುಟಕ್ಕೆ)

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ರಾವಣನ ಬದುಕು ತಿಳಿದುಕೊಳ್ಳಬೇಕು. ಎಲ್ಲಾ ವಸ್ತುಗಳನ್ನು ಪಡೆದನು. ಕಡೆಗೆ ತಂಗಿ ಶೂರ್ಪನಖಿ ಅಂಗವಿಕಲಳಾದಳು. ಇವನು ಮನೋವೈಕಲ್ಯಕ್ಕೆ ಒಳಗಾದ. ರಾಮನ ವಿರುದ್ಧ ಯುದ್ಧ ಸಾರಿದ. ಹನುಮಂತ ಉಪದೇಶ ನೀಡಿದ. ಹತ್ತು ತಲೆಯಿದ್ದರೂ ರಾವಣ ಅದಕ್ಕೆ ಕುರುಡನಾದ. ಕಡೆಗೆ ರಾವಣನು ರಾಕ್ಷಸಕುಲ, ತನ್ನ ಕುಟುಂಬ, ತನ್ನ ಪುತ್ರರು, ತನ್ನ ಸಂಪತ್ತು ಎಲ್ಲಾ ಕಳೆದುಕೊಂಡ. ಹೀಯತೇ ಅರ್ಥಾತ್= ಪುರುಷಾರ್ಥಗಳನ್ನು ಕಳೆದುಕೊಂಡು ಅಧಃ ಪತನ ಹೊಂದುತ್ತಾನೆ.

ಹೀಗಾಗಿ ನಮ್ಮ ಉದ್ಧಾರ ಹೊರಗಿನ ವಸ್ತುಗಳಲ್ಲಿ ಇಲ್ಲ. ಅತ್ಯಾವಶ್ಯಕ ವಸ್ತು ಬಳಸಿರಿ. ಅದು ಅನಿವಾರ್ಯ ಆಗಿರಬೇಕು. ಹಾಗಾಗದೆ ಫ್ಯಾಶನ್ ಆಗಿ ಟೆನ್ಶನ್ ಆದರೆ ಅದು ಪ್ರೇಯಸ್ಸು.

There Stands a lot of difference between
what one needs and what one wants.

ಆದ್ದರಿಂದ ಪ್ರೇಯಸ್ಸು ಸುಖ ಕೊಡಬಹುದು. ನಿತ್ಯವಲ್ಲ. ನಾವು ಕಟ್ಟಿದ ಮನೆ ಇನ್ನೂರು ವರ್ಷ ಇರಬಹುದು. ಆದರೆ ನಾವೇ ಎಪ್ಪತ್ತು ವರ್ಷಗಳಷ್ಟು ಸಹ ಬದುಕಿರಲಾರೆವು.

Properties are not proper-ties

ಹೀಗಾಗಿ ನಾವು Penny wise-powd foolish ಆಗಬಾರದು. ಹೆಂಡತಿ–ಮಕ್ಕಳ ಸುಖ ಪಶುಜನ್ಮದಲ್ಲಿಯೂ ಸಿಕ್ಕೀತು. ಬ್ರಹ್ಮಜ್ಞಾನದ, ಮಾನವಜನ್ಮದ ಪ್ರಯೋಜನ ಪಡೆಯದೇ ಪಶುವಿನ ಸುಖಪಡೆದ ಮಾನವನನ್ನು ಜಾಣ ಎನ್ನಬಹುದೇ ? ಕನ್ನಡಕ ಸಿಕ್ಕಿತೆಂದು ಕಣ್ಣೇ ಬೇಡವೆಂಬ ಹಠ ಮಾಡಿದವನನ್ನು ಸಾಧು ಎನ್ನಬಹುದೇ? ಹೀಗಾಗಿ ಅವನು ಇಂತಹ ಪುರುಷಾರ್ಥದಿಂದ ಅಧಃಪತನ ಹೊಂದುತ್ತಾನೆ. ಹೀಗಾಗಿ ಪ್ರೇಯಸ್ಸನ್ನೇ ಬಯಸಬೇಡಿ.

ಇಲ್ಲಿ ಯಮಧರ್ಮರಾಜ ಉ=ಎನ್ನುತ್ತಾ ಅವಧಾರಣ ಮಾಡಿದ್ದಾನೆ. ಪ್ರೇಯಸ್ಸನ್ನೇ ಬಯಸಬೇಡಿ. ಶ್ರೇಯಸ್ಸೂ ಜೊತೆಗಿರಲಿ. ವಿಷಮಿಶ್ರಿತ ಆಹಾರ ತಿಂದವನನ್ನು ಬದುಕಿಸುವುದು ಕಷ್ಟ ಎಂದು ವೈದ್ಯರು ಹೇಳುತ್ತಿರುವಾಗ, ಬರೀ ವಿಷವನ್ನೇ ಕುಡಿದಿರುವನ ಸ್ಥಿತಿ–ದುಃಸ್ಥಿತಿ

ಗೋವುಗಳನ್ನು–ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ

ಹೇಗಿರಬೇಡ? ಅದು ನಿಮ್ಮ ಜೀವನ ಆಗಬಾರದು.

ಹೀಗಾಗಿ ಪ್ರೇಯಸ್ಸನ್ನು ಅರ್ಥಮಾಡಿಕೊಂಡು ಅಸಾರತೆ ತಿಳಿದು ಶ್ರೇಯಸ್ಸನ್ನು ತೆಗೆದುಕೊಳ್ಳಿ. ಇಲ್ಲಿ ಯಮಧರ್ಮರಾಜ–ಆದದಾನಸ್ಯ=ಅರಿತು ಚೆನ್ನಾಗಿ ಆಯ್ದುಕೊಂಡವನಿಗೆ ಶ್ರೇಯಸ್ಸು ಎನ್ನುತ್ತಾನೆ. ಶ್ರೇಯಸ್ಸು–ಪ್ರೇಯಸ್ಸುಗಳಲ್ಲಿ ಸಿಕ್ಕಿದ್ದನ್ನು ಬಾಚಿಕೊಂಡವನಿಗೆ ಒಳ್ಳೆಯದಾಗುತ್ತದೆ ಎಂದೇನೂ ಇಲ್ಲ. ಅವನು ಸಿಕ್ಕಿತು ಎಂದು ಒಳ್ಳೆಯ ದಾರಿ ಹಿಡಿದವನು, ಆ ಮೇಲೆ ಬೇರೆ ದಾರಿಯಲ್ಲಿ ಸುಖಿಯಾಗಿರುವವನನ್ನು ಕಂಡು, ಅಯ್ಯೋ ನಾನು ಯಾಕಾದರೂ ಈ ದಾರಿ ತೆಗೆದುಕೊಂಡೆನೋ ಎಂದು ಕೈ ಕೈ ಹಿಸುಕಿಕೊಳ್ಳುತ್ತಾನೆ. ಹೀಗಾಗಿ ಇದು ಸಿಕ್ಕಿದ್ದನ್ನು ಬಾಚಿಕೊಳ್ಳುವುದು ಅಲ್ಲ. ಎಷ್ಟೋ ಜನ ಶ್ರೇಯಸ್ಸಿನ ಮಾರ್ಗಕ್ಕೆ ಬಂದು ಆಮೇಲೆ ತಪಸ್ಸು ಬಿಟ್ಟು ಸುಖಮಾರ್ಗಕ್ಕಾಗಿ ಹಲುಬಿದ್ದಾರೆ. ಸಂಸಾರ ಬಿಟ್ಟು ಕಾಡಿಗೆ ಬಂದು ತಪಸ್ಸು ಮಾಡಿ ಅಪ್ಸರೆಯರನ್ನು ಕಂಡು ಅಪ್ಪಿಕೊಂಡು ತಪ್ಪು ಮಾಡಿದವರಿದ್ದಾರೆ. ಇಂದ್ರನಿಗಂತೂ ತಪಸ್ಸಿಗೆ ಬಂದು ತಪ್ಪುಮಾಡುವವರ ದೊಡ್ಡಪಟ್ಟಿಯೇ ಇದೆ. ವ್ರತ ಮಾಡಿ ಮಧ್ಯೆ ಬಿಟ್ಟು ಈಗೆಲ್ಲಾ ಇದು ಸಾಧಾರಣ ಎಂದು ಸಬೂಬು ಹೇಳಿ ನರಕಕ್ಕೆ ಬರುವವರ ಭಾರೀ ಪರಿಚಯವೇ ಇದೆ. ಹೀಗಾಗಿ ಶ್ರೇಯಸ್ಸನ್ನು ಯಾವುದೋ ಒಂದು ಎಂದು ತಿಳಿಯಬೇಡಿ. ಶ್ರೇಯಸ್ಸನ್ನು ಅರಿತು ಚೆನ್ನಾಗಿ ಆಯ್ದುಕೊಳ್ಳಿ.

It is not a choice-it is a previlige ಎಂಬ ಭಾವನೆ ಇರಲಿ. ಮಾರ್ಕಂಡೇಯನ ಕಥೆ ಈ ನಿಟ್ಟಿನಲ್ಲಿ ಸ್ಮರಣೀಯ.

ಅವನು ಹುಟ್ಟುವಾಗಲೇ ಅಲ್ಪಾಯು. ಹದಿನಾರು ದಾಟದ ಈ ದೇಹ ಮರಣಹೊಂದುತ್ತದೆ ಎಂದರಿವಿತ್ತು. ಆತ ಸಾವನ್ನು ತಪ್ಪಿಸಿಕೊಳ್ಳಲು ಬೇಗನೇ ಸುಖಪಡಲು ಪ್ರಯತ್ನಿಸಲಿಲ್ಲ. ಆಯುಸ್ಸಿಗಿಂತ ಆಶೀರ್ವಾದ ಸಿಗುವಂತಹ ಬದುಕು ನಡೆಸಲು ತೀರ್ಮಾನಿಸಿದ. ಭಗವಂತನನ್ನು ಕುರಿತು ತಪಗೈದ. ಭಗವಂತನು ಏನು ಬೇಕು ಎಂದು ಕೇಳಿದ. ಆಯುಸ್ಸು ಎನ್ನಲಿಲ್ಲ. ಸುಖ ಎಂದು ತಡವರಿಸಲಿಲ್ಲ. ನೇರ ಕೇಳಿದ. ನಿನ್ನ ಮಹಿಮೆ ನೋಡಬೇಕು ಎಂದ. ಹಾಗೆಯೇ ಪ್ರಳಯದ ಸಂದರ್ಭದ ರೌದ್ರಾವತಾರದ ಸನ್ನಿವೇಶ ಸವಿದ. ಹರಿಯ ಅಗಾಧ ಮಹಿಮೆ ಅರಿತು ಬದುಕು ಸಾಕೆನ್ನಿಸಿತು. ಆದರೆ ಭಗವಂತನಿಗೆ ಅನ್ನಿಸಿತು. ನನ್ನ ಮಹಿಮೆ ಕಂಡ ಈ ಮಹಾಮಹಿಮ ಇರಬೇಕು. ಕಾಲ ಇವನನ್ನು ಕಬಳಿಸಬಾರದು. ಇವನು ಚಿರಂಜೀವಿ ಆಗಿರಲಿ ಎಂದರು. ಹೀಗಾಗಿ ಬ್ರಹ್ಮಜ್ಞಾನ ಬಯಸಿದ ಮಾರ್ಕಂಡೇಯ ಚಿರಂಜೀವಿಯಾದ.

**(ಸಶೇಷ)**

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

ಈ ದೃಷ್ಟಿಯಿಂದ ನಾಲಿಗೆಯಲ್ಲಿರುವ ಹರಿಯನ್ನುದ್ದೇಶಿಸಿ ಹೀಗೆ ಪ್ರಾರ್ಥಿಸಿ ಎನ್ನುತ್ತಾರೆ ಶ್ರೀಮದಾಚಾರ್ಯರು–

**ಹೇ ಜಿಹ್ವೇ ಮಮ ನಿಸ್ನೇಹೇ ಹರಿಂ ಕಿಂ ನಾನುಭಾಷಸೇ ।**
**ಹರಿಂ ವಂದಸ್ವ ಕಲ್ಯಾಣಿ ಸಂಸಾರೋದಧಿನೌರ್ಹರಿಃ ॥**

(ಕೃಷ್ಣಾಮೃತ ಮಹಾರ್ಣವ)

ಕರುಣೆಯಿಲ್ಲದ ನನ್ನ ನಾಲಿಗೆಯೇ! ಹರಿಯನ್ನೇಕೆ ಕೊಂಡಾಡದಿರುವಿ. ಕಲ್ಯಾಣಿ! ಹರಿಯನ್ನು ಸ್ತುತಿಸು. ಸಂಸಾರ ಸಮುದ್ರದ ದಡಮುಟ್ಟಿಸುವ ದೋಣಿಯಂತಿದ್ದಾನೆ ಶ್ರೀಹರಿ.

ವಾಮನನ ವ್ಯಾಪಾರ ಇಲ್ಲಿಗೆ ಮುಗಿಯಲಿಲ್ಲ. ಅವನು ಮಾಯಾವಟು. ಅವನ ವ್ಯಾಪಾರ ಎಲ್ಲೆಲ್ಲಿ ಹೇಗಿದೆ ಎಂದು ನಮ್ಮಿಂದ ತಿಳಿಯುವುದು ಬಹಳ ಕಷ್ಟ. ಆದರೂ ಒಂದನ್ನು ತಿಳಿಯಬಹುದು. ಬಲಿ ಯಾಗಕ್ಕೆ ಬಂದ ವಾಮನ ಸಕಲಲೋಕಗಳಿಗೂ ತಾನೇ ಅಧಿಪತಿ ಎಂದು ತೋರಿಸಿಕೊಟ್ಟ. ಸಕಲ ವಸ್ತುಗಳನ್ನು ತನಗೇ ಪಡೆಯುವ ಅಧಿಕಾರ ಎಂದು ಮನದಟ್ಟು ಮಾಡಿಸಿದ. ಇಂದಿಗೂ ಹಾಗೇ ತಾನೆ. ಇಂದು ಯಾವುದೇ ದಾನ ಧರ್ಮಗಳು ನಡೆಯುವುದಿದ್ದರೂ ದಾನ; ತೆಗೆದುಕೊಳ್ಳುವ ವ್ಯಕ್ತಿ ಪೂರ್ವ ಅಥವಾ ಉತ್ತರ ದಿಕ್ಕಿಗೆ ಕುಳಿತುಕೊಳ್ಳುತ್ತಾನೆ. ಈ ಎರಡೂ ದಿಕ್ಕುಗಳಿಗೂ ಅಭಿಮಾನಿಗಳಾಗಿ ಇಂದ್ರ–ಚಂದ್ರರಿದ್ದರೂ ಅವರ ಅಂತರ್ಯಾಮಿಯಾಗಿ ದಾನಸ್ವೀಕರಿಸುವ ದೇವತೆ–ಉಪೇಂದ್ರ–ವಾಮನನೇ ಆಗಿದ್ದಾನೆ. ಆದ್ದರಿಂದ **'ಸ್ಥಲೇ ಚ'** ಅಂದರೆ ಪೂರ್ವ ಸ್ಥಳ, ಉತ್ತರ ಸ್ಥಳ ಎಂದರ್ಥ. ಅಲ್ಲಿ ಪ್ರತಿಗ್ರಹೀತೃವಿನಲ್ಲಿ ಕುಳಿತು ವಾಮನನು ಸ್ವೀಕರಿಸಿ ಬ್ರಾಹ್ಮಣನ ನಾಲಿಗೆಯಲ್ಲಿ ನಿಂತು ಅನುಗ್ರಹಿಸಲಿ ಎಂದು ವಾಮನನಲ್ಲಿ ಪ್ರಾರ್ಥಿಸಬೇಕು. ಹೀಗೆ ವಾಮನನ ವ್ಯಾಪಾರ ಬಹಳ ಸುಂದರವಾದುದರಿಂದ ವಾಮನನಿಗೆ **ವಾಮನ= ಸುಂದರ** ಎಂದು ಹೆಸರು.

**ಅಜಿನ ದಂಡ ಕಮಂಡಲು ಮೇಖಲಾ**
**ರುಚಿರಪಾವನವಾಮನಮೂರ್ತಯೇ ।**

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.

**ಮಿತಜಗತ್ತ್ರಿತಯಾಯ ಜಿತಾರಯೇ**
**ನಿಗಮವಾಕ್ಪಟವೇ ವಟವೇ ನಮಃ ॥**
**ಕಾಮಜನಕ ನಿನ್ನನಾಮ ಪ್ರೇಮದಿಂದ ಪಾಡುವಂಥ ।**
**ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ ॥**

**'ವಿಶ್ವರೂಪಃ ತ್ರಿವಿಕ್ರಮಃ ಖೇ ಅವತು'**
**"ವಿಶ್ವರೂಪಿಯಾದ ತ್ರಿವಿಕ್ರಮನು ಆಕಾಶದಲ್ಲಿ ಬರುವ ಆಪತ್ತುಗಳಿಂದ ರಕ್ಷಿಸಲಿ"**

ಆಕಾಶದ ವ್ಯಾಪ್ತಿಯಂತೆ ತ್ರಿವಿಕ್ರಮನ ವ್ಯಾಪ್ತಿ, ನೆಲದ ಎಲ್ಲ ಭಾಗವನ್ನು ವಾಮನ ವ್ಯಾಪಿಸಿದಂತೆ ಅವಕಾಶದ ಭಾಗಗಳನ್ನೆಲ್ಲ ತ್ರಿವಿಕ್ರಮನು ರಕ್ಷಿಸುತ್ತಾನೆ. ನೆಲದಲ್ಲಿ ಸಂಚರಿಸುವವರಿಗಿಂತಲೂ ಅಧಿಕವೇಗ ಆಕಾಶದಲ್ಲಿ ಸಂಚರಿಸುವವರದು. ಆಕಾಶದಲ್ಲಿ ವೇಗವನ್ನು ನಿಯಂತ್ರಿಸಬಲ್ಲ ಸಾಮರ್ಥ್ಯ ತ್ರಿವಿಕ್ರಮನದ್ದು. ತ್ರಿವಿಕ್ರಮನ ಪರಾಕ್ರಮ ಮೂರ್ಲೋಕಗಳನ್ನು ಮೀರಿದೆ. ಇಂತಹ ತ್ರಿವಿಕ್ರಮನು ಎಂತಹ ವೇಗವನ್ನೂ ನಿಯಂತ್ರಿಸಿ ರಕ್ಷಿಸಬಲ್ಲ. ಇಂದು ಅಪಘಾತಗಳು ಪಾದಚಾರಿಗಳಿಗಿಂತಲೂ ಅಧಿಕವಾಗಿ ವಾಹನ ಸಂಚಾರಿಗಳಿಗೇ ಅಧಿಕ. ಅದರಲ್ಲಿಯೂ ಆಕಾಶದಲ್ಲಿ ಸಂಚರಿಸುವ ವಿಮಾನಗಳು ಕೈಕೊಟ್ಟರೆ ಯಾರೂ ಬದುಕಲು ಸಾಧ್ಯವಿಲ್ಲ. ಇಂಥಹ ಪ್ರಸಂಗಗಳಲ್ಲಿ ತ್ರಿವಿಕ್ರಮನು ರಕ್ಷಿಸಲಿ ಎಂದು ಪ್ರಾರ್ಥಿಸಬೇಕು.

ತ್ರಿವಿಕ್ರಮ ಮೂರುಲೋಕಗಳಲ್ಲಿ ಕೇವಲ ತನ್ನ ಪರಾಕ್ರಮದಿಂದ ಪ್ರಸಿದ್ಧನಲ್ಲ ತನ್ನ ನಿಜರೂಪದಿಂದಲೇ ಪ್ರಸಿದ್ಧನೆನ್ನಲು. **'ವಿಶ್ವರೂಪಃ'** ಎಂದಿದ್ದಾರೆ. ತ್ರಿವಿಕ್ರಮನ ವ್ಯಕ್ತಿತ್ವವನ್ನು ಬಯಸುವ ಮಹತ್ವಾಕಾಂಕ್ಷಿಗಳಿಗೆಲ್ಲ ಮಹತ್ವದಾಯಕನು ತ್ರಿವಿಕ್ರಮನಾಗಿದ್ದಾನೆ. ಇವನ ಎತ್ತರವನ್ನು ಏರಬಲ್ಲ ತಾಕತ್ತು ಜೀವಕೋಟಿಗೇ ಇಲ್ಲ. ಜನರುಗಳು ಬಹುರೂಪದ ವ್ಯಕ್ತಿತ್ವವನ್ನು ಸಾಧಿಸಿಕೊಂಡಿದ್ದರೂ ಕೆಲವೊಮ್ಮೆ ಸ್ವಾರ್ಥರೂಪರೂ ಆಗಿರುತ್ತಾರೆ. ಬಹುರೂಪಿಗಳ ಸ್ವರೂಪ ನಿಸ್ವಾರ್ಥಪರವಾಗಿರುವುದು ಬಲು ಅಪರೂಪ. ಆದರೆ ವಿಶ್ವರೂಪಿ ತ್ರಿವಿಕ್ರಮನ ಪರೋಪಕಾರದ ರೂಪ ಅಪರಿಮಿತ, ಅನಂತ, ಅನನ್ಯ, ಜನಿ ಇಲ್ಲದ ಅವನಿದೇವನ ನಖದಿಂದ ಜನಿಸಿದ ಜಗತ್ಪಾವನಿ ಎನಿಸಿದ ಗಂಗೆ ಇಂದಿಗೂ ಅಘಭಂಗೇ, ಜಗತ್ತುಂಗೇ, ಸುರತರಂಗೇ, ಸದಾಪಾಂಗೇ, ಕೃತಸಂಗೇ, ನಭೋಗಂಗೇ ಎಂದು ಪ್ರಸಿದ್ಧಳಾಗಿ ತನ್ನಲ್ಲಿ ಮಿಂದವರ ಪಾಪ ಅಪಹರಿಸುತ್ತಿದ್ದಾಳೆ.

**(ಮುಂದುವರಿಯುವುದು)**

**ವೇದ-ಇತಿಹಾಸ-ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ**

ಭಾಗ–11

# ಜೀವನಯಜ್ಞ

## ಚಿಂತಿಸೆ ಈ ಎಲುಬಿನ ಹಂದರ
## ಇಂದಿರೇಶನ ಸುಂದರ ಮಂದಿರ

ಸಂಕಲನ: ಸುನಂದಕೀ

ಅತಿ ದುರ್ಲಭವಾದ, ಕ್ಷಣಿಕವಾದರೂ ಬಹಳ ಮಹತ್ವಪೂರ್ಣವಾದ ನಮ್ಮ ಶರೀರವು ಕೇವಲ ಸುಖ ದುಃಖಾನುಭವಗಳಿಗೆ ಸಾಧನವಾಗಿ ಇರುವುದಲ್ಲ. ಭಗವದರ್ಪಣೀಯವಾದ ಉತ್ತಮ ಉಡುಗೊರೆಯೂ ಹೌದು. ಭಗವಂತನಿಗೆ ರಥವಾಗಿ ಅರ್ಪಿತವಾದ, ದೈವೀವೀಣೆಯಾಗಿ ಚಿಂತಿತವಾದ, ಈ ದೇಹವು ಭಗವಂತನು ನೆಲೆಸುವ ಉತ್ತರ ಸುಂದರ ಪಟ್ಟಣವನ್ನಾಗಿಯೂ ಅನುಸಂಧಾನಿಸಬೇಕು ಎಂದರು ಪ್ರಾಚೀನರು.

ಈ ಶರೀರ ಇಂದಿರಾರಮಣನ ಸುಂದರ ಪಟ್ಟಣ. ಒಂದು ಪಟ್ಟಣಕ್ಕೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಗಳಿರುವಂತೆ ಈ ಶರೀರ ಪಟ್ಟಣಕ್ಕೂ ನಾಲ್ಕು ದ್ವಾರಗಳು. ಪೂರ್ವದಿಕ್ಕಿನ ಮಹಾದ್ವಾರಗಳಾಗಿ ಕಣ್ಣು ಮೂಗು ಹಾಗೂ ಬಾಯಿಗಳಿವೆ. ದಕ್ಷಿಣ ಹಾಗೂ ಉತ್ತರ ದಿಕ್ಕಿನ ದ್ವಾರಗಳಾಗಿ ಬಲ ಕಿವಿ ಹಾಗೂ ಎಡಕಿವಿಗಳಿವೆ. ವಿಸರ್ಜನೇಂದ್ರಿಯಗಳಾದ ಉಪಸ್ಥ ಹಾಗೂ ಗುದಗಳು ಪಶ್ಚಿಮ ಮಹಾದ್ವಾರಗಳು. ನಮ್ಮ ದೇಹಗಳಲ್ಲಿರುವ ಆರು ಚಕ್ರಗಳೇ ಆ ಪುರುಷೋತ್ತಮನಿರುವ ಉತ್ತಮಸದನಗಳು. ಉದಯವು ಆ ಭಗವಂತನ ಮಂಟಪ. ಪ್ರಾಕೃತ ಮೂರು ಗುಣಗಳೇ ಕಲಶಗಳು. ದೇಹದಲ್ಲಿರುವ ಸಪ್ತಧಾತುಗಳೇ ಭಗವಂತನ ಪಟ್ಟಣಕ್ಕಿರುವ ಸಪ್ತ ಪ್ರಾಕಾರಗಳು(ಸಪ್ತಾವರಣ). ದೇಹಗತ ನಾಡಿಗಳು ಉಪವೀಥಿಗಳು(ಅಡ್ಡರಸ್ತೆ). ಸುಷುಮ್ನಾ ನಾಡಿಯೇ ರಾಜಮಾರ್ಗ. ನಮಗಿರುವ ಅಷ್ಟಮದಗಳೇ ಅಷ್ಟ ದಿಗ್ಗಜಗಳು. ನಮ್ಮ ದೇಹದಲ್ಲಿರುವ ರೋಮಕೂಪಗಳೇ ಆ ಪಟ್ಟಣದಲ್ಲಿರುವ ವನಗಳು. ಪ್ರಾಣಾಪಾನಾದಿ ಪಂಚರೂಪಿಯಾದ ಪ್ರಾಣದೇವರೇ ಈ ಪಟ್ಟಣಕ್ಕೆ ಬರುವ ಕಾಮಕ್ರೋಧಾದಿ ಅರಿಷಡ್ವರ್ಗವನ್ನು ಸಂಹರಿಸಿ ರಕ್ಷಿಸುವ ತಳವಾರ. ಕಣ್ಣು ಇತ್ಯಾದಿ ಇಂದ್ರಿಯಗಳಲ್ಲಿರುವ ಸೂರ್ಯ–ಚಂದ್ರಾದಿ ದೇವತೆಗಳೇ ಲಕ್ಷ್ಮೀಪತಿಯ ಈ ಪಟ್ಟಣದ ದ್ವಾರಪಾಲಕರು ಮನಸ್ಸಿನ ಅನೇಕ ತರಹದ ಆಲೋಚನಾ ಲಹರಿಯೇ ಈ ನಗರದ ಪದಾತಿಗಳು ಇಂದ್ರಿಯಗಳ ಮೂಲಕ ನಮ್ಮಿಂದ ಅನುಭವಿಸಲ್ಪಡುವ ವಿಷಯ ಪದಾರ್ಥಗಳೇ ಈ ಪಟ್ಟಣಕ್ಕೆ ಬರುವ ಸರಕು ಸಾಮಾಗ್ರಿಗಳು ಇವುಗಳೆಲ್ಲದರ ವ್ಯಾಪಾರದ ವ್ಯವಸ್ಥೆಯನ್ನು ಮಾಡುವವನು(ಸುವರ್ತಕ)

ಮನೆಯ ಮುಂದೆ ಶ್ರೀತುಳಸಿಯ ವನ ಕಂಗೊಳಿಸುತ್ತಿರಲಿ

ಈ ದೇಹದಲ್ಲಿರುವ ಜೀವನು. ಇಂತಹ ಜೀವನಿಂದ ಆಗುವ ಕರ್ಮಫಲವೆಂಬ ಕಪ್ಪಕಾಣಿಕೆಯನ್ನು ಸ್ವೀಕರಿಸುವ ದೊರೆ ಬಿಂಬನಾದ ಶ್ರೀಹರಿ.

ಶರೀರವೆಂಬ ಪ್ರಮುಖದ್ವಾರವೆನಿಸುವ ಮುಖದಲ್ಲಿ ತೋರಣವಾಗಿರುವಂತಹದ್ದು ಸ್ಮಶ್ರುಗಳು(ಮೀಸೆ). ತಲೆಯ ಮೇಲಿರುವ ಕೇಶಗಳೇ ಮಹಾದ್ವಾರದ ಮೇಲಿರುವ ಪತಾಕೆಗಳು. ನಮ್ಮ ದೇಹದ ಪಾದ, ಮೊಣಕಾಲು, ತೊಡೆ, ಉದರ, ಶಿರಸ್ಸು, ಇತ್ಯಾದಿಗಳು ಈ ಭಗವಂತನ ಪಟ್ಟಣದಲ್ಲಿರುವ ಮನೆಯ ಉಪ್ಪರಿಗೆಗಳು. ಅನ್ನಮಯ-ಪ್ರಾಣಮಯ-ಮನೋಮಯ-ವಿಜ್ಞಾನಮಯ-ಆನಂದಮಯ ಕೋಶಗಳೇ ಭಗವಂತನು ವಾಸಿಸಲು ಇರುವ ಐದುಕೋಣೆಗಳು. ಉರುಪರಾಕ್ರಮನಾದ ಭಗವಂತನ ಈ(ಶರೀರ) ಅರಮನೆಗೆ ಇರುವ ಹೊಳೆವ ಕನ್ನಡಿಗಳ ಸಾಲುಗಳಾಗಿ ಹತ್ತು ಇಂದ್ರಿಯಗಳು ಇರುವುವು. ಅರವಿದೂರನಾದ ಹರಿಯ ವಿಹಾರಕ್ಕೆ ನಮ್ಮ ಚಿತ್ತವೇ ಮಂಟಪ. ಮರಳಿಬೀಸುವ ಶ್ವಾಸಗಳೇ(ಶ್ವಾಸೋಚ್ಛ್ವಾಸ) ಆ ಪರಮಾತ್ಮನಿಗೆ ಚಾಮರಸೇವೆ. ನಮ್ಮ ಬುದ್ಧಿ ಆತನಿಗಾಗಿರುವ ವಿಲಾಸಿನೀ. ನಾವು ಎರಗುವ ಸಾಷ್ಟಾಂಗ ಪ್ರಣಾಮಗಳೇ ಆ ಮಾಧವನಿಗೆ ಅರ್ಪಿಸುವ ಸುಶಯನಗಳು. ಹೀಗೆ ನಮ್ಮ ದೇಹವನ್ನೇ ಭಗವಂತನ ಪಟ್ಟಣವನ್ನಾಗಿ ಅರ್ಪಿಸಿ ಕೃತಾರ್ಥರಾಗಬಹುದು.

ಹಾಗೆಯೇ ನಮ್ಮ ಈ ದೇಹವು ಭಗವಂತನಿಗಾಗಿರುವ ಸುನಾವೆ(ದೋಣಿ) ಎಂದೂ ಹರಿದಾಸರು ಬಣ್ಣಿಸಿದರು. ಸಂಸಾರ ಸಾಗರದೊಳಗೆ ಕರ್ಮಪ್ರವಾಹದೊಳಗೆ ಸಂಚರಿಸುವ ನಮ್ಮ ಈ ದೇಹವನ್ನು ಸುನಾವೆಯನ್ನಾಗಿ ಮಾಡಿ ಅದರೊಳಗೆ ತನ್ನವರಾದ ದೇವತೆಗಳಿಂದೊಡಗೂಡಿದ ಜಗದೊಡೆಯನಾದ ಲಕ್ಷ್ಮೀರಮಣನು ಕುಳಿತು ದಿವಸ-ದಿವಸಗಳಲ್ಲಿಯೂ ಕ್ರೀಡಿಸುವವನು. ಈ ಪರಿಯಲ್ಲಿ ಚಿಂತಿಸೆ ಆ ಪವನನಯ್ಯನಾದ ಭಗವಂತನು ಭವಾಬ್ಧಿಯನ್ನು ದಾಟಿಸಿ ಪರಮಸುಖವನ್ನು ನೀಡುವನು.

ಅಲ್ಲದೇ ನಮ್ಮ ದೇಹವು ದೇವರ ಆವಾಸಸ್ಥಾನ ಎಂದರೆ ದೇವಾಲಯ ಎಂಬ ಭಾವನೆಯಂತೂ ಭಾರತೀಯತೆಯ ನೆರಳು. ಅದರ ಹರವಿನ ಅರಿವಿಗಾಗಿ ಇಲ್ಲಿದೆ ಅದರ ತುಸು ತಿರುಳು.

ಒಂದು ಬಾರಿ ನಮ್ಮ ದೇಹವನ್ನು ನಖಶಿಖಾಂತವಾಗಿ ಪೂರ್ಣವಾಗಿ ಚಿಂತಿಸೋಣ. ಅದರ ಒಳ ಹೊರಗುಗಳನ್ನು ತಿಳಿಯೋಣ. ಭಗವಂತನ ಇರುವಿಕೆಯನ್ನು ಸಾಮಾನ್ಯರೂಪದಲ್ಲಿ ಅನುಸಂಧಾನಿಸಲು ಪ್ರಯತ್ನಿಸೋಣ(ಇಲ್ಲಿ ಪ್ರಸ್ತುತಪಡಿಸಿದ ಚಿಂತನೆ ಕೇವಲ ಸಾಮಾನ್ಯ

**ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ**

ದೃಷ್ಟಿಯಲ್ಲಿ).

ಜೀವನಿಗೆ ಇರುವ ಸ್ವರೂಪ ದೇಹದೊಳಗೆ ಶರೀರ ನಾಮಕನಾಗಿರುವ ಭಗವಂತನು ಹದಿನಾರು ಕಲೆಗಳುಳ್ಳ ಲಿಂಗ ಶರೀರದೊಳಗೆ ಪುರುಷನಾಮಕನಾಗಿರುವನು. ಶಾಂತಿಪತಿಯಾದ ಅನಿರುದ್ಧನು ಜೀವನ ಅನಿರುದ್ಧದೇಹದಲ್ಲಿರುವನು. ಕೃತಿಪತಿ ಪ್ರದ್ಯುಮ್ನನು ಈ ಸ್ಥೂಲಶರೀರದಲ್ಲಿರುವನು. ಅದೇ ರೀತಿ ಈ ದೇಹದ ಸಪ್ತಧಾತುಗಳಲ್ಲಿರುವ ನಲವತ್ತೊಂಬತ್ತು ಮರುದ್ದೇವತೆಗಳಲ್ಲಿ ಸಮಷ್ಟಿಯಾಗಿ ನಲವತ್ತೊಂಬತ್ತು ರೂಪದಲ್ಲಿರುವನು. ಮುನ್ನೂರ ಅರವತ್ತು ಮಜ್ಜದಲ್ಲಿರುವ ಮೂರು ಮೂರು ಸ್ಥಾನಗಳಲ್ಲಿ ಒಟ್ಟು ಸಾವಿರದಎಂಬತ್ತು ರೂಪಗಳಿಂದ ಇರುವನು. ಹಾಗೆಯೇ, ಮುನ್ನೂರ ಅರವತ್ತು ಅಸ್ಥಿಗಳಲ್ಲಿ, ಮೂರುವರೆ ಕೋಟಿ ರೋಮಗಳಲ್ಲಿ ಅಷ್ಟೇ ಸಂಖ್ಯೆಗಳಿಂದ ಇರುವನು. ಹಿಂದಿನ ಸಂಚಿಕೆಗಳಲ್ಲಿ ಸೂಚಿಸಿದಂತೆ ದೇಹಕ್ಕೆ ಅಗತ್ಯವಿರುವ ಇಪ್ಪತ್ನಾಲ್ಕು ತತ್ವಗಳಲ್ಲಿ, ಏಕಾದಶೇಂದ್ರಿಯಗಳಲ್ಲಿ ತದಭಿಮಾನಿದೇವತೆಗಳಲ್ಲಿ, ಅನೇಕ ರೂಪಗಳಿಂದ ಸನ್ನಿಹಿತನಾಗಿರುವವನು.

ಅಲ್ಲದೇ ಅನ್ನಮಯಕೋಶದಲ್ಲಿ ಎಂಟು ಸಾವಿರದ ಇನ್ನೂರ ಐವತ್ತೊಂದು ರೂಪಗಳಿಂದ ಅನಿರುದ್ಧನು, ಪ್ರಾಣಮಯಕೋಶದಲ್ಲಿ ಐದುಸಾವಿರದ ಐನ್ನೂರ ನಲವತ್ತಮೂರು ರೂಪಗಳಿಂದ ಪ್ರದ್ಯುಮ್ನನು, ಮನೋಮಯಕೋಶದಲ್ಲಿ ಐದು ಲಕ್ಷದ ಅರವತ್ತೆರಡು ಸಾವಿರದ ನೂರ ಏಳು ರೂಪಗಳಿಂದ ಸಂಕರ್ಷಣನು, ವಿಜ್ಞಾನಮಯಕೋಶದಲ್ಲಿ ನಾಲ್ಕು ಸಾವಿರದ ಮುನ್ನೂರ ಎಪ್ಪತ್ನಾಲ್ಕು ರೂಪಗಳಿಂದ ವಾಸುದೇವನು, ಆನಂದಮಯಕೋಶದಲ್ಲಿ ಐದು ಸಾವಿರದ ನೂರ ಇಪ್ಪತ್ತೈದು ರೂಪಗಳಿಂದ ನಾರಾಯಣನು ಇರುವನು.

ಇಷ್ಟೇ ಅಲ್ಲದೆ ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಹಂಸ, ಇತ್ಯಾದಿ ರೂಪಗಳಿಂದ ಅನೇಕ ಅವಸ್ಥೆ, ಕಾರ್ಯ, ಕಾಲಗಳಿಗೆ ತಕ್ಕಂತೆ ನಮ್ಮ ದೇಹದಲ್ಲಿದ್ದು ನಮ್ಮನ್ನು ಪ್ರೇರೇಪಿಸುವ ಆ ಭಗವಂತನ ಅಸಂಖ್ಯಾತ ರೂಪಗಳು ನಮ್ಮ ದೇಹದಲ್ಲಿರುವುವು. ಗಣನೆ ಮಾಡಲಾಗದಷ್ಟು ರೂಪಗಳಿಂದ ಭಗವಂತನು ನಮ್ಮೊಂದಿಗೆ ನಮ್ಮ ದೇಹದಲ್ಲಿರಲು ಈ ದೇಹವು ನಿಶ್ಚಯವಾಗಿ ಕೇವಲ ಭಗವಂತನ ಮಂದಿರವಲ್ಲ. ಇದು ಭಗವನ್ಮಯವಾದ ಮಂದಿರ.

ಈ ಅನುಸಂಧಾನದಿಂದ ನಮ್ಮ ದೇಹದ ಇಂಚಿಂಚೂ ಕೂಡ ಸಾರ್ಥಕ ಎಂಬ ಭಾವನೆ ಬಾರದೇ ಇರದು.

**(ಮುಂದುವರಿಯುತ್ತದೆ)**

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

ಆಗಲೇ ವಿಶ್ವಾಮಿತ್ರರು ಕಾಣಿಸಿಕೊಂಡರು. ದುಡ್ಡು ಕೊಡುವವನಾದರೆ ಚಂಡಾಲನಾದರೇನು. ಯಾರಾದರೇನು? ನನಗೆ ಬೇಕಾದ ದಕ್ಷಿಣೆ ಕೊಟ್ಟುಬಿಡು ಎಂದರು. ಆಗ ಹರಿಶ್ಚಂದ್ರನೆಂದ ಸ್ವಾಮಿನ್! ಸೂರ್ಯವಂಶದ ಸಿಂಹಾಸನದ ಬೆಳ್ಗೊಡೆಯ ನೆರಳಾಶ್ರಯದಲ್ಲಿ ಬದುಕುವ ಯೋಗ್ಯತೆಯುಳ್ಳ ನಾನು ಚಂಡಾಲ ದಾಸನಾಗಬೇಕೆ? ನಿನ್ನ ಪಾಡಿನ ಬಗ್ಗೆ ನನಗೆ ಕಾಳಜಿ ಇಲ್ಲ. ನನಗೆ ಬೇಕಾದುದು ದುಡ್ಡು. ಅದರ ಮೂಲ ಪರೀಕ್ಷಿಸುವ ಅವಶ್ಯಕತೆ ನನಗಿಲ್ಲ. ಸೂರ್ಯ ಅಸ್ತಮಿಸುತ್ತಿದ್ದಾನೆ. ದುಡ್ಡು ಕೊಡದೇ ಹೋದರೆ ಶಪಿಸಿ ಭಸ್ಮಮಾಡುತ್ತೇನೆ ಜೋಕೆ! ಎಂದು ಕಟುವಾಗಿ ನುಡಿದರು ವಿಶ್ವಾಮಿತ್ರರು ಅನ್ಯ ಮಾರ್ಗ ಕಾಣದೇ ಚಂಡಾಲನ ಬಳಿ ರಾಜ ಹೇಳಿದ. ಅವರ ಆಸೆ ಪೂರೈಸುವಷ್ಟು ಸಂಪತ್ತು ನಿನ್ನಲ್ಲಿರುವುದಾದರೆ ನಾನು ನಿನ್ನ ದಾಸ ಎಂದ. ಓಹೋ ಕೊಡುವೆನೆಂದು ಶತಯೋಜನ ವಿಸ್ತೀರ್ಣವಾದ ನಗರಗಳಿಂದ ಕೂಡಿದ ಸಮೃದ್ಧವಾದ ಭೂಮಿಯನ್ನು ಕ್ರಯವಾಗಿ ಕೊಟ್ಟು ಹರಿಶ್ಚಂದ್ರನನ್ನು ಖರೀದಿಸಿದ ಚಾಂಡಾಲ. ವಿಶ್ವಾಮಿತ್ರರಿಗೆ ಕೊಡಬೇಕಾದ ದಕ್ಷಿಣೆಯನ್ನು ಕೊಟ್ಟು ಚಾಂಡಾಲನ ಹಿಂದೆ ನಡೆದ ಸ್ಮಶಾನ ಭೂಮಿಯೆಡೆಗೆ. ಹೆಣ ಸುಡಲು ಬರುವ ಜನರಲ್ಲಿ ಸುಂಕ ಕೇಳಬೇಕು. ಅದರಲ್ಲಿ ಆರು ಭಾಗ. ರಾಜನಿಗೆ ಮೂರು ಪಾಲು ಚಾಂಡಾಲನಿಗೆ ಎರಡು ಪಾಲು, ಜೀವಿಕೆಗೆ ಒಂದು ಪಾಲು, ಈ ರೀತಿ ನಡೆದಿತ್ತು ಅವನ ಜೀವನ. ದಿನ ಬೆಳಗಾದರೆ ಶಿವದರ್ಶನವಿಲ್ಲ ಶವದರ್ಶನ. ಪ್ರಸನ್ನ ಮುಖಾವಲೋಕನವಿಲ್ಲ ಅಳು ಮೋರೆಗಳು. ಹಾ ತಂದೆ, ಹಾ ತಾಯಿ, ಹಾ ಮಿತ್ರ, ಪುತ್ರ ಇತ್ಯಾದಿ ಆಕ್ರಂದ ಧ್ವನಿಯ ಸುಪ್ರಭಾತ. ಇಂತಹ ಕ್ರೂರ ಅಮಂಗಲ ವಾತಾವರಣದಲ್ಲಿ ಜೀವನ ಸಾಗಿಸುವ ಬವಣೆ ರಾತ್ರಿ ನಿದ್ರೆ ಹತ್ತಿದಲ್ಲಿ ಇಂತದೇ ದುಃಸ್ವಪ್ನಗಳು. ಹನ್ನೆರಡು ತಿಂಗಳು ಕಳೆದಿದೆ. ಹಾಗೊಂದು ದಿನ ಮಲಗಿದವನಿಗೆ ವಿಚಿತ್ರವಾದ ಸ್ವಪ್ನಗಳು ಮನಸ್ಸಿನ ಪರದೆಯಲ್ಲಿ ಮೂಡಿ ಬಂದವು. ಕರ್ಮವಶನಾಗಿ ಚಾಂಡಾಲ ಯೋನಿಯಲ್ಲಿ ತಾನು ಹುಟ್ಟಿದ್ದು. ಏಳನೆ ವರ್ಷದಲ್ಲೇ ಮಸಣದ ಕಾಯಕ, ಬ್ರಾಹ್ಮಣ ಬಾಲಕನ ಶವವನ್ನು ಹೊತ್ತು ತಂದು ಸುಡಲೆತ್ನಿಸಿದಾಗ. ಬ್ರಾಹ್ಮಣರಲ್ಲಿ ಸುಂಕ ಕೇಳಿದ. ಅವರು ಶಾಪ ಕೊಟ್ಟರು. ಈಗಾಗಲೆ ಹೋಗಿ ನರಕಕ್ಕೆ ಬೀಳೆಂದು. ನರಕದ ಘೋರ ದರ್ಶನ ನೂರು ವರ್ಷ ನರಕ ಯಾತನೆಯ ಅನುಭವ. ಮತ್ತೆ ಕತ್ತೆ, ಒಂಟೆ, ಮಂಗ ಇತ್ಯಾದಿ ಯೋನಿಗಳಲ್ಲಿ ಜನ್ಮ ಇದೂ

ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ

ನೂರು ವರ್ಷ ಮತ್ತೆ ಸೂರ್ಯವಂಶದಲ್ಲಿ ಹರಿಶ್ಚಂದ್ರನಾಗಿ ಜನ್ಮ. ದ್ಯೂತದಲ್ಲಿ ಎಲ್ಲವನ್ನು ಕಳೆದುಕೊಂಡು ತಾನೂ ಕಾಡು ಪಾಲಾಗಿದ್ದ. ಅಲ್ಲಿ ಸಿಂಹದ ಬಾಯಿಗೆ ಆಹಾರವಾದ. ಮತ್ತೆ ಸ್ವರ್ಗವನ್ನು ಕಂಡ. ಹನ್ನೆರಡು ವರ್ಷ ಅಲ್ಲಿ ಕಳೆದ. ಆದರೆ ಮೃತಪುತ್ರಳಾಗಿ ಮಲಿನಾಂಬರವನ್ನುಟ್ಟು ತನ್ನ ಪತ್ನಿಯನ್ನು ಕಂಡ. ಆಗ ಯಮನ ದರ್ಶನವಾಯಿತು. ಯಮನಿಂದ ವಿಶ್ವಾಮಿತ್ರನ ಅಸಹ್ಯ ಕೋಪಕ್ಕೆ ನಿನ್ನ ಮಗ ಬಲಿಯಾಗುತ್ತಾನೆ. ನೀನೀಗ ಮತ್ತೆ ಭೂಮಿಗೆ ಹೋಗು. ದುಃಖ ಶೇಷವನ್ನು ಉಣ್ಣು ಎಂದ. ಯಮದೂತರು ಸ್ವರ್ಗದಿಂದ ಕೆಳಗೆ ನೂಕಿದರು. ಆಗ ಎಚ್ಚರವಾಯಿತು. ಅಲ್ಲಿದ್ದವರಲ್ಲಿ ಕೇಳಿದ ವಿಚಿತ್ರ ಸ್ವಪ್ನವನ್ನು ಕಂಡೆ. ಹನ್ನೆರಡು ವರ್ಷದ ಅನುಭವ ನಾನು ಮಲಗಿ ಹನ್ನೆರಡು ವರ್ಷಗಳಾಗಿಲ್ಲವಷ್ಟೇ? ಮತ್ತೆ ಭಗವಂತನಲ್ಲಿ ದುಃಸ್ವಪ್ನದ ದರ್ಶನದ ಶಮನಕ್ಕೆ ಪ್ರಾರ್ಥನೆ ಸಲ್ಲಿಸಿದ **'ಸ್ವಸ್ತಿಕುರ್ವಂತು ಮೇ ದೇವಾಃ ಶೈಭ್ಯಾಯಾ ಬಾಲಕಸ್ಯ ಚ ....'** ಮತ್ತೆ ಅದೇ ಚಿಂತೆ ತನ್ನ ಹೆಂಡತಿ ಹಾಗೂ ಮಗ ಹೇಗಿದ್ದಾರೋ, ತನ್ನ ಸ್ಥಿತಿಯ ಬಗ್ಗೆ ಆಲೋಚಿಸುತ್ತಾ ನಿಟ್ಟುಸಿರು ಬಿಟ್ಟ.

## ಮತ್ತೆ ಸತಿ ಪತಿಗಳೊಂದಾದರು

ಆಗಲೇ ಒಬ್ಬಾಕೆ ಸರ್ಪದಿಂದ ಕಚ್ಚಲ್ಪಟ್ಟು ಮೃತನಾದ ತನ್ನ ಮಗನ ಶವವನ್ನು ಬಟ್ಟೆಯಲ್ಲಿ ಸುತ್ತಿ ಸುಡುವುದಕ್ಕೆ ಸ್ಮಶಾನಕ್ಕೆ ಬಂದಿದ್ದಾಳೆ. ಅತ್ತು ಅತ್ತು ಕಣ್ಣು ಗುಳಿಬಿದ್ದಿದೆ. ಹರಿಶ್ಚಂದ್ರ ಸುಂಕ ವಸೂಲಿಗೆ ಅಲ್ಲಿ ಬಂದ. ಮಗನ ಬಗ್ಗೆ ರೋದಿಸುವ ಬಡಕಲು ದೇಹದ ಆ ಹೆಣ್ಣು ಮಗಳು ತನ್ನರಸಿ ಎಂಬ ಗುರುತು ಹಿಡಿಯದಾದ. ಶವದ ವಸ್ತ್ರ ಅವನಿಗೆ ಸೇರಬೇಕಾದ್ದು. ಬಟ್ಟೆಯಿಂದ ಮುಕ್ತವಾದ ಶವದ ಶರೀರ, ಹೊತ್ತು ತಂದ ಹೆಣ್ಣು ಮಗಳ ಮುಖ ಅವನಲ್ಲಿ ಅಲೋಚನೆಯನ್ನು ಹುಟ್ಟಿಸಿತು. ಅವಳ ಚಂದ್ರಮುಖ ನೀಳವಾದ ಗುಂಗುರುಕೇಶ, ತಿದ್ದಿದಂತಿರುವ ಭ್ರೂ, ಮತ್ತೆ ಚಕ್ರವರ್ತಿ ಲಕ್ಷಣದಿಂದೊಪ್ಪುವ ಬಾಲಕನ ಮೃತ ದೇಹ. ಅವನ ಸುಪ್ತ ಪ್ರಜ್ಞೆಯನ್ನು ತಟ್ಟಿತು. ಈ ಸ್ಥಿತಿ ತನ್ನ ಮಗನಿಗೇ ಬಂದಿದೆಯೇ. ಯಾಕೆಂದರೆ ಇದೇ ಪ್ರಾಯದ ಇಂಥದೇ ಮೈಮಾಟವನ್ನು ಹೊಂದಿರುವ ತನ್ನ ಮಗು ಎಂದು ಅಂತರಂಗ ಮಾತನಾಡುತ್ತಿತ್ತು. ಆಗಲೇ ಆ ಹೆಣ್ಣು ಮಗಳು ಈ ರೀತಿ ಪ್ರಲಾಪಿಸುತ್ತಾಳೆ. ಯಾವ ಪಾಪಕ್ಕಾಗಿ ಈ ಶಿಕ್ಷೆ. **'ರಾಜ್ಯನಾಶಃ ಸುಹೃತ್ತ್ಯಾಗಃ ಭಾರ್ಯಾತನಯವಿಕ್ರಯಃ। ಹರಿಶ್ಚಂದ್ರಸ್ಯ ರಾಜರ್ಷೇಃ ಕಿಂ ವಿಧೇ ನಕೃತಂ ತ್ವಯಾ'** ಇಷ್ಟು ಸಾಕಾಗದ್ದಕ್ಕೆ ಮಗನನ್ನು ನಮ್ಮಿಂದ ಆಗಲಿಸಿದೆಯಾ ವಿಧಿಯೇ? ಎಂಬ ಮಾತು ಕೇಳುತ್ತಿದ್ದ ಹರಿಶ್ಚಂದ್ರ ನೀನು ಶೈಭ್ಯೆಯೇ. ಇದು ನನ್ನ ಮಗನ ಹೆಣವೇ ಎನ್ನುತ್ತಾ ಮೂರ್ಛಿತನಾದ. ಚಾಂಡಾಲ ವೃತ್ತಿಯಿಂದ ಜೀವನ ಸಾಗಿಸುತ್ತಿರುವ ಈತ ತನ್ನ ಪತಿಯೆಂದು ತಿಳಿದ ಅವಳೂ ಮೂರ್ಛಿತಳಾದಳು.

★

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ**

ಪುರಾಣ ಪರಿಚಯ

ಭಾಗ-30

# ಶ್ರೀವಿಷ್ಣುಪುರಾಣ

## ಪ್ರಹ್ಲಾದ ಚರಿತ್ರೆ

-ಸ್ಫೂರ್ತಿ

ದಕ್ಷನ ಅರವತ್ತು ಹೆಣ್ಮಕ್ಕಳಲ್ಲಿ ಹದಿಮೂರು ಹೆಣ್ಮಕ್ಕಳನ್ನು ಕಶ್ಯಪನು ವರಿಸಿದನು. ಅದಿತಿ, ದಿತಿ, ದನು, ಅರಿಷ್ಟಾ, ಸುರಸಾ, ಖಸಾ, ಸುರಭಿ, ವಿನತಾ, ತಾಮ್ರಾ, ಕ್ರೋಧವಶಾ, ಇಳಾ, ಕದ್ರು, ಮುನಿ ಇವರೇ ಆ ಹದಿಮೂರು ಹೆಣ್ಮಕ್ಕಳು.

ಹಿಂದೆ ಚಾಕ್ಷುಷ ಮನ್ವಂತರದಲ್ಲಿ 'ತುಷಿತಾ' ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದ ಶ್ರೇಷ್ಠ ದೇವತೆಗಳು ಒಗ್ಗೂಡಿ ಚರ್ಚಿಸಿ ವೈವಸ್ವತಮನ್ವಂತರದಲ್ಲಿ ಅದಿತಿ ಗರ್ಭದಲ್ಲಿ ಹುಟ್ಟಿ ಬಂದರೆ ಶ್ರೇಯಸ್ಸಾಗುತ್ತದೆಂದು ತಿಳಿದು ಕಶ್ಯಪರಿಗೆ ಅದಿತಿಯಲ್ಲಿ ಹುಟ್ಟಿ ಬಂದರು. ವಿಷ್ಣು, ಶಕ್ರ, ಅರ್ಯಮಾ, ಧಾತಾ, ತ್ವಷ್ಟಾ, ಪೂಷಾ, ವಿವಸ್ವಾನ್, ಸವಿತಾ, ಮಿತ್ರ, ವರುಣ, ಅಂಶು, ಭಗ-ಈ ಹನ್ನೆರಡು ಅದಿತಿಪುತ್ರರು ಆದಿತ್ಯರೆಂದು ಪ್ರಸಿದ್ಧರಾದರು.

ಕಶ್ಯಪರ ಉಳಿದ ಪತ್ನಿಯರಿಂದಲೂ ಪ್ರಜಾವೃದ್ಧಿಯಾಯಿತು. ಇವರಲ್ಲಿ ದಿತಿಯಲ್ಲಿ ಹಿರಣ್ಯಕಶಿಪು ಹಾಗೂ ಹಿರಣ್ಯಾಕ್ಷರೆಂಬ ಇಬ್ಬರು ಮಕ್ಕಳಾದರು. ಇವರೇ ಆದಿ ದೈತ್ಯರು. ಸಿಂಹಿಕೆ ಇವರಿಬ್ಬರ ತಂಗಿ.

### ಹರಿಭಕ್ತನಿಗೆ ಎಂದಿಗೂ ಸೋಲಿಲ್ಲ

ಹಿರಣ್ಯಕಶಿಪುವಿಗೆ ಅನುಹ್ಲಾದ, ಹ್ಲಾದ, ಪ್ರಹ್ಲಾದ, ಸಂಹ್ಲಾದ ಎಂದು ನಾಲ್ಕು ಮಕ್ಕಳು. ಇವರಲ್ಲಿ ಪ್ರಹ್ಲಾದ ಪರಮಭಗವದ್ಭಕ್ತ. ವಾಸುದೇವನನ್ನು ಸದಾ ಮನಸ್ಸಿನಲ್ಲಿ ಭಜಿಸುತ್ತಿದ್ದ ಅವನಿಗೆ ದೈತ್ಯೇಂದ್ರನಾದ ಹಿರಣ್ಯಕಶಿಪು ಪ್ರಯೋಗಿಸಿದ ಅಗ್ನಿಯು ಮೈತುಂಬ ವ್ಯಾಪಿಸಿದರೂ ಸುಡಲಿಲ್ಲ. ಆತನನ್ನು ಪಾಶದಿಂದ ಬಂಧಿಸಿ ಸಮುದ್ರಜಲದಲ್ಲಿ ಮುಳುಗಿಸಿ ಅತ್ತಿತ್ತ ಹೊರಳಿಸಿದರೂ ಭೂಮಿಯೇ ಅತ್ತಿತ್ತ ಹೊರಳಿತು. ದೈತ್ಯೇಂದ್ರ ಎಸೆದ ಅಸ್ತ್ರ-ಶಸ್ತ್ರಗಳೆಲ್ಲವೂ ಅವನಲ್ಲಿ ವ್ಯರ್ಥವಾಯಿತು. ವಿಷವನ್ನುಗುಳುವ ಮಹಾಸರ್ಪಗಳು ಅವನನ್ನು ಮುಗಿಸಲು ಅಸಮರ್ಥವಾದವು; ಬೆಟ್ಟಗಳನ್ನೆಲ್ಲ ತಂದು ದೇಹವನ್ನೇ ಮುಚ್ಚಿದರೂ ವಿಷ್ಣುವಿನ ಸ್ಮರಣೆಯ ಬಲದಿಂದ ಆತ ಸಾಯಲಿಲ್ಲ; ಮೆಟ್ಟಿ ಕೊಲ್ಲಲು ಬಂದ ಮದಗಜಗಳೇ ಭಕ್ತಿಯ ಬಲದಿಂದ ದಂತರಹಿತವಾದವು. ದೈತ್ಯೇಂದ್ರನಿಂದ ಉತ್ಪಾದಿಸಲ್ಪಟ್ಟ ದುಷ್ಟಶಕ್ತಿಗಳು

ರಾಮಾಯಣ-ಮಹಾಭಾರತ-ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ

ಗೋವಿಂದ ಭಕ್ತನಾದ ಅವನನ್ನು ಮುಗಿಸಲು ಅಸಮರ್ಥವಾದವು; ಮಹಾ ಮಾಯಾವಿಯಾದ ಶಂಬರನ ಮಾಯವು ಅವನಲ್ಲಿ ವ್ಯರ್ಥವಾದವು. ದೈತ್ಯೇಂದ್ರನ ಅಡುಗೆಯವನು ತಂದ ವಿಷಪಾನ ಮಾಡಿಯೂ ಜೀರ್ಣಮಾಡಿಕೊಂಡ. ಸಮಚಿತ್ತನಾಗಿ, ಸತ್ಯ ಶೌರ್ಯಾದಿ ಸದ್ಗುಣಗಳಿಗೆ ಆಶ್ರಯನಾಗಿ ಪ್ರಹ್ಲಾದನು ಎಲ್ಲ ಸಜ್ಜನರಿಗೆ ಮಾದರಿಯಾಗಿದ್ದನು. ಹೀಗೆ ಪರಾಶರರು ತಿಳಿಸಲು ಪ್ರಹ್ಲಾದನ ಕಥೆಯನ್ನು ವಿಸ್ತಾರವಾಗಿ ಬಣ್ಣಿಸಬೇಕೆಂದು ಮೈತ್ರೇಯರು ಪ್ರಾರ್ಥಿಸುತ್ತಾರೆ.

ಮೈತ್ರೇಯರ ಮಾತಿನಂತೆ ಪರಾಶರರು ಪ್ರಹ್ಲಾದನ ಚರಿತ್ರೆಯನ್ನು ವಿಸ್ತಾರವಾಗಿ ವರ್ಣಿಸುತ್ತಾರೆ.

ದಿತಿಯ ಪುತ್ರನಾದ ಹಿರಣ್ಯಕಶಿಪು ಬ್ರಹ್ಮನ ವರದಿಂದ ಮೂರುಲೋಕಗಳನ್ನು ವಶ ಮಾಡಿಕೊಂಡ. ತಾನೇ ಇಂದ್ರನಾದ. ಸೂರ್ಯನಾದ. ಅಗ್ನಿ, ವಾಯು, ನೀರಿನ ಒಡೆಯನಾದ. ತಾನೇ ಕುಬೇರನಾದ; ಯಮನಾದ; ಯಜ್ಞದಲ್ಲಿ ಆಹುತಿಗಳನ್ನು ತಾನೇ ಸ್ವೀಕರಿಸಿದ. ದೇವತೆಗಳು ಅವನಿಗೆ ಹೆದರಿ ಸ್ವರ್ಗವನ್ನು ತ್ಯಜಿಸಿ ಮನುಷ್ಯರೂಪವನ್ನು ತೊಟ್ಟು ಭೂಮಿಯಲ್ಲಿ ತಿರುಗಿದರು. ಹಿರಣ್ಯಕಶಿಪು ಮೂರು ಲೋಕಗಳ ಸುಖ–ಭೋಗಗಳನ್ನು ತಾನೆ ಅನುಭವಿಸಿದ. ಅವನ ಪುತ್ರ ಮಹಾತ್ಮನಾದ ಪ್ರಹ್ಲಾದನು ಗುರುಕುಲವನ್ನು ಹೊಂದಿ ಬಾಲಪಾಠಗಳನ್ನು ಪಠಿಸಿದ. ಒಮ್ಮೆ ಗುರುಗಳೊಡನೆ ಪ್ರಹ್ಲಾದ ಪಾನಮತ್ತನಾದ ತಂದೆಯ ಎದುರಿಗೆ ಬಂದು ನಮಸ್ಕರಿಸಿದ. ಹಿರಣ್ಯಕಶಿಪು 'ಮಗು; ನೀನು ಇಲ್ಲಿಯವರೆಗೆ ಕಲಿತದ್ದರ ಸಾರಭೂತವಾದ ಒಳ್ಳೆಯ ಮಾತನ್ನು ಹೇಳು' ಎಂದು ತಿಳಿಸಿದ. ಪ್ರಹ್ಲಾದನು ಕೈಮುಗಿದು 'ಅಪ್ಪ ನನ್ನ ಮನಸ್ಸಿನಲ್ಲಿ ಎಲ್ಲದರ ಸಾರಭೂತವಾಗಿರುವ ಮಾತೇನಿದೆ ಅದನ್ನು ನಿನ್ನ ಆಜ್ಞೆಯಿಂದ ಹೇಳುವೆನು. ಮನಸ್ಸಿಟ್ಟು ಕೇಳು. ಆದಿ–ಮಧ್ಯ–ಅಂತ್ಯರಹಿತನಾದ, ಜನಿರಹಿತನಾದ, ವೃದ್ಧಿ–ಕ್ಷಯವಿಲ್ಲದ ಎಲ್ಲ ಕಾರಣಕ್ಕೂ ಕಾರಣನಾದ ಅಚ್ಯುತನಿಗೆ ನಮಸ್ಕರಿಸುತ್ತೇನೆ' ಎಂದು ಹೇಳಿದ. ಈ ಮಾತನ್ನು ಕೇಳಿ ಹಿರಣ್ಯಕಶಿಪು ಕೋಪದಿಂದ ಕೆಂಗಣ್ಣಿನಿಂದ ಗುರುವನ್ನು ನೋಡುತ್ತ 'ಎಲೈ ದುರ್ಬುದ್ಧಿಯ ಬ್ರಹ್ಮಬಂಧುವೆ; ನೀನು ನನ್ನ ಆಜ್ಞೆಯನ್ನು ಮೀರಿ ಅಸಾರವಾದ ನನಗಾಗದವನ ಸ್ತುತಿಯನ್ನು ಹೇಳಿಕೊಟ್ಟಿರುವಿಯಲ್ಲವೆ?' ಎಂದು ಗದರಿಸಿದ. ಗುರುವು 'ದೈತ್ಯೇಂದ್ರ; ಕೋಪವಶವಾಗದಿರು. ಈ ನಿನ್ನ ಮಗ ನನ್ನ ಉಪದೇಶದ ಮಾತನ್ನು ಹೇಳುತ್ತಿಲ್ಲ' ಎಂದು ನುಡಿದ.

**(ಸಶೇಷ)**

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ

ಮಧ್ವಚರಿತ್ರೆ



# ಮುಕ್ತಿಯಲ್ಲಿ ಸುಖವಿದೆ–ಅಪ್ರಾಕೃತ ದೇಹವಿದೆ

–ಅನಂತಕೃಷ್ಣಾಚಾರ್ಯ

ಆನಂದತೀರ್ಥ ಭಗವತ್ಪಾದರು ತಮ್ಮ ಉಪನ್ಯಾಸ ಭಾರತಿಯನ್ನು ಮುಂದುವರಿಸುತ್ತ– ನಾವು 'ಮುಕ್ತಿಯಲ್ಲಿ ಜೀವನು ತನ್ನದೇ ಆದ ಆನಂದದ ತೆರೆದುಕೊಳ್ಳುವಿಕೆಯುಳ್ಳವನಾಗಿ ಅಂದರೆ ಸ್ವರೂಪಾನಂದ ಆವಿರ್ಭಾವ ಹೊಂದಿದವನಾಗಿ ಶುಭಶಬ್ದ, ಶುಭರಸ ಮುಂತಾದ ವಿಷಯ ಸುಖವನ್ನು ಅನುಭವಿಸುತ್ತಾನೆ' ಎಂದು ತಿಳಿಸಿದೆವು. ಈ ವಿಷಯದಲ್ಲಿ ಕೆಲವರು– 'ಮುಕ್ತಿಯಲ್ಲಿ ಸುಖವೇ ಇಲ್ಲ. ಏಕೆಂದರೆ ಯಾವತ್ತೂ ಸುಖ ಇರುವಲ್ಲಿ ದುಃಖ ಇದ್ದೇ ಇರುತ್ತದೆ. ಯಾರು ಈ ಸಂಸಾರದ ದುಃಖದಿಂದ ಬೆಂದು–ನೊಂದು 'ಸಾಕಿನ್ನು ಈ ಸಂಸಾರ' ಎಂದು ವೈರಾಗ್ಯ ಹೊಂದಿ ಕಠಿಣವಾದ ತಪಸ್ಸು ಮಾಡಿ ಮೋಕ್ಷವನ್ನು ಪಡೆಯುತ್ತಾನೋ ಅಂತಹ ಜೀವನಿಗೆ ಮುಕ್ತಿಯಲ್ಲಿಯೂ ಸುಖ ಉಂಟು ಎಂದರೆ ದುಃಖವೂ ಉಂಟು ಎಂದು ಹೇಳಿದಂತಾಯಿತಲ್ಲವೆ? ದುಃಖ ಇರುವುದು ಮುಕ್ತಿಯಾಗುವುದಾದರೂ ಹೇಗೆ ಸಾಧ್ಯ? ಆದ್ದರಿಂದ ಮುಕ್ತನಿಗೆ ಸುಖವಿಲ್ಲ ಎಂಬುವುದೇ ಸರಿ! ಎಂದು ಆಕ್ಷೇಪಿಸಬಹುದು.

ಇದು ಸರಿಯಲ್ಲ. ಈ ಸಂಸಾರದಲ್ಲಿ ಸುಖ–ದುಃಖಗಳು ಕೂಡಿಕೊಂಡು ಇರುವುದನ್ನು ಕಂಡು ಮುಕ್ತಿಯಲ್ಲಿಯೂ ಹಾಗೆಯೇ ಎಂದು ಎಣಿಸಬಾರದು. ಅಲ್ಲಿ ದುಃಖರಹಿತವಾದ ಸ್ವರೂಪಭೂತವಾದ ಸುಖವಿದೆ. ಆ ಸುಖವನ್ನೂ ಒಪ್ಪದಿದ್ದರೆ ಜೀವನ ಸ್ವರೂಪವನ್ನೇ ಒಪ್ಪುವುದಿಲ್ಲ ಎಂದಂತಾಯಿತು. ಏಕೆಂದರೆ ಜೀವನು ಮೋಕ್ಷ ಯೋಗ್ಯನಾಗಿದ್ದರೆ ಸುಖ ಸ್ವರೂಪಿ, ನರಕಯೋಗ್ಯನಾಗಿದ್ದರೆ ದುಃಖಸ್ವರೂಪಿಯಾಗಿರುತ್ತಾನಷ್ಟೆ. ಇಂತಹ ಜೀವಸ್ವರೂಪವನ್ನು ಒಪ್ಪದಿದ್ದರೆ ಜೀವನನ್ನೇ ಒಪ್ಪುವುದಿಲ್ಲ ಎಂದಂತಾಗಿ ಅವೈದಿಕರಾದ ಬೌದ್ಧವಾದಿ ಎನ್ನಬೇಕಾಗುತ್ತದೆ. ಹಾಗಾಗದಿರಲು ಮುಕ್ತ ಜೀವನು ಸುಖಸ್ವರೂಪಿಯಾಗಿದ್ದಾನೆಂದು ಒಪ್ಪಲೇ ಬೇಕಾಗುತ್ತದೆ.

ಹೀಗೆ ಹೇಳಿದಾಗ ಮತ್ತೇ ಆಕ್ಷೇಪ ಬರಬಹುದು. ಮುಕ್ತ ಜೀವನಲ್ಲಿ ಸುಖವಿದೆ ಎಂದು ಒಪ್ಪಿದರೆ ಆ ಸುಖವನ್ನು ಅನುಭವಿಸಲು ಒಂದು ದೇಹವನ್ನು ಒಪ್ಪಬೇಕಾಗುತ್ತದೆ. 'ಆಯಿತು; ದೇಹವನ್ನು ಒಪ್ಪೋಣ' ಎಂದರೆ ದೇಹದಿಂದುಂಟಾಗುವ ಶೋಕ–ಮೋಹ

ಸತ್ಯ, ಪ್ರಿಯ ಮತ್ತು ಹಿತನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ

ಮುಪ್ಪು-ರೋಗ-ಹಸಿವು-ಬಾಯಾರಿಕೆ ಈ ಆರು ತೆರೆಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕು. 'ಈ ಆರು ಇರಲಿ' ಎನ್ನುವುದಾದರೆ ಸಂಸಾರಕ್ಕಿಂತ ಮೋಕ್ಷಕ್ಕೆ ವಿಶೇಷ ಏನು ಬಂತು? ಶೋಕ ಮುಂತಾದ ಆರು ತೆರೆಗಳು ಬೇಡವೆಂದು ಬಯಸಿ ಸಾಧನೆ ಮಾಡಿ ಪಡೆದ ಮೋಕ್ಷದಲ್ಲಿ ಮತ್ತೆ ಶೋಕ-ಮೋಹಗಳೇ ದೊರೆತರೆ ಯಾರು ಮೋಕ್ಷವನ್ನು ಬಯಸುತ್ತಾರೆ. ಆದ್ದರಿಂದ ಮೋಕ್ಷದಲ್ಲಿ ಜೀವನಿಗೆ ದೇಹವಿದೆ ಎಂದು ಒಪ್ಪಬಾರದು ಎಂದು.

ಇದು ಸರಿಯಾಗಿ ವಿಮರ್ಶಿಸದೆ ಹೇಳುವ ಮಾತು. ಜೀವನಿಗೆ ಈ ಸಂಸಾರದಲ್ಲಿ ಶೋಕ-ಮೋಹ ಮುಂತಾದುವು ಇರುವುದು ಕೇವಲ ದೇಹವಿರುವುದರಿಂದಲ್ಲ; ಪಾಂಚಭೌತಿಕವಾದ ದೇಹವಿರುವುದರಿಂದ. ಈ ಪಾಂಚಭೌತಿಕವಾದ ದೇಹದಿಂದ ಶಾಶ್ವತವಾಗಿ ದೂರಾಗುವುದೇ ಮುಕ್ತಿ. ಪಂಚಭೂತಗಳಿಂದ ನಿರ್ಮಿತವಾದ ಪ್ರಾಕೃತ ದೇಹವಿರುವಲ್ಲಿ ಶೋಕ-ಮೋಹ ಮುಂತಾದುವು ಇದ್ದೇ ಇರುತ್ತವೆ. ಆದ್ದರಿಂದ ಮುಮುಕ್ಷುವು ನಿರಂತರವಾದ ಸಾಧನೆಯಿಂದ ಭಗವಂತನ ಅನುಗ್ರಹದ ಮೂಲಕ ಈ ಪಾಂಚಭೌತಿಕ ದೇಹದಿಂದ ದೂರಾಗಿ ಸಂಸಾರ ಬಂಧನವನ್ನು ಕಳಚಿಕೊಳ್ಳುತ್ತಾನೆ. ಮೋಕ್ಷಲೋಕವನ್ನು ಹೊಂದಿ ಅಲ್ಲಿ ಅಪ್ರಾಕೃತವಾದ, ಜ್ಞಾನಾನಂದಮಯವಾದ ದೇಹವನ್ನು ಪಡೆಯುತ್ತಾನೆ.

ಒಂದೊಮ್ಮೆ ಇದನ್ನು ಒಪ್ಪದೆ ದೇಹವಿರುವಲ್ಲಿ ಶೋಕ-ಮೋಹ ಮುಂತಾದ ಆರರ ಕಾಟ ಇದ್ದೇ ಇರುತ್ತದೆ ಎಂದು ಹಠ ಹಿಡಿದರೆ ಭಗವಂತನಿಗೂ ದೇಹವಿರುವುದರಿಂದ ಶೋಕ-ಮೋಹಗಳಿವೆ ಎಂದು ಹೇಳಬೇಕಾದೀತು. ನಾವು ಭಗವಂತನಿಗೂ ದೇಹವನ್ನು ಒಪ್ಪುವುದಿಲ್ಲವೆಂದರೆ ಭಗವಂತನಿಗೆ ಇಚ್ಛೆ ಮುಂತಾದ ಗುಣಗಳಿಲ್ಲವೆಂದಂತಾಯಿತು. ಏಕೆಂದರೆ ದೇಹವಿದ್ದರೆ ಮಾತ್ರ ಇಚ್ಛೆ ಮುಂತಾದುವುಗಳು ಬರಲು ಸಾಧ್ಯ. ಹೀಗೆ ಇಚ್ಛೆ ಮುಂತಾದುವುಗಳಿಲ್ಲದ ದೇವರು ಮೊಲದ ಕೋಡಿನಂತೆಯೆ ಸರಿ. ಮೊಲದ ಕೋಡು ಹೆಸರಿಗೆ ಮಾತ್ರ. ವಾಸ್ತವಿಕವಾಗಿ ಇಲ್ಲ. ಹಾಗೆಯೇ ದೇವರು ಹೆಸರಿಗೆ ಮಾತ್ರ. ವಾಸ್ತವಿಕವಾಗಿ ಇಲ್ಲ. ಇದ್ದರೆ ಇಚ್ಛೆ ಮುಂತಾದುವುಗಳು ಇರಬೇಕಷ್ಟೆ.

ನಾವು ದೇವರಲ್ಲಿ ದೇಹವನ್ನು ಒಪ್ಪದಿದ್ದರೂ ವಿಷಯ ಮುಂತಾದುವುಗಳನ್ನು ಗ್ರಹಿಸುವ ಸ್ವರೂಪವನ್ನು ಒಪ್ಪುತ್ತೇವೆಂದರೆ ಅದನ್ನೇ ನಾವು ದೇಹ ಎಂಬ ಶಬ್ದದಿಂದ ಹೇಳಿದ್ದೇ ಹೊರತು ಈ ಸಂಸಾರದ ಪಾಂಚಭೌತಿಕ ದೇಹವನ್ನಲ್ಲ. ಅಂತಹ ದೇಹ ಮುಕ್ತ ಜೀವನಿಗೂ ಒಪ್ಪಲು ಯಾವ ತೊಂದರೆಯೂ ಇಲ್ಲ. **(ಸಶೇಷ)**

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಭಯವ ಪರಿಹರಿಸುವ ಪದ ನಯವ ತೋರಿಪ ಪದ
ಪ್ರಿಯ ಮುಕ್ತಿಪದನೈದಿಸುವ ಪದ
ಹಯವದನ ದೇವನ್ನ ಪದಕೆ ಪಾತುರನಾಗಿ
ಜಯಿಸುವ ವಾದಿರಾಜನ ಪದವು

ಎಂದು ಹೇಳಿ ಈ ವೈಕುಂಠವರ್ಣನೆಯು ಪಠನೆಯಿಂದ ಮೋಕ್ಷಪ್ರಾಪ್ತಿಯಾಗುವುದೆಂದು ಸೂಚಿಸಿರುವರು. ಸ್ವತಃ ವರದೇಂದ್ರರು ಓಂಕಾರ ಮಂತ್ರ–ವರ್ಣಗಳ ಉತ್ಪತ್ತಿ ಕ್ರಮವನ್ನು ತಿಳಿಸುವ ಪದವನ್ನು ರಚಿಸುತ್ತಾ ಕೊನೆಯಲ್ಲಿ

ಸೀತಾರಮಣ ಮೂಲರಾಮನತಿಹರುಷದಿ ವಿ–
ಧಾತಗುಪದೇಶಿಸಿದ ಈ ತೆರದಲಿ
ಪ್ರೀತಿಯಿಂದಲಿ ನಿರಂತರದಲಿದ ಪಠಿಸೆ ಶೇ–
ಷಾತಪತ್ರನು ಕಾಮಿತಾರ್ಥವನೀವ ॥

ಬ್ಯಾಗವಾಪಿದ ರಂಗವಲಿದ ಶ್ರೀನರಸಿಂಹ
ಭಾಗವತರಣುಗ ಶ್ರೀಜಗನ್ನಾಥದಾಸರು
ಬಾಗಿವಿಜ್ಞಾಪಿಸಲು ಕೈಕೊಂಡು ಪರಮಾನು
ರಾಗದಲಿ ಪೇಳಿದೆವು ತಂತ್ರಸಾರ

ಕರುಣಾಬ್ಧಿ ವಸುಧೇಂದ್ರರಾಯರ ಕೃಪಾಬಲದಿ
ವಿರಚಿಸಿದೆವೀ ಗ್ರಂಥ ಪದರೂಪದಿ
ಅರಸಿಕನು ನಿಂದಿಸಲು ಕುಂದಾವುದಿದಕೆ ಭಾ–
ಸ್ಕರನುದಯ ಘೂಕ ದೂಷಿಸಿದ ತೆರವು ॥

ಧರ್ಮಾರ್ಥ–ಕಾಮ–ಮೋಕ್ಷಗಳೀವಗ್ರಂಥವಿದು
ನಿರ್ಮಾಣಮಾಡಿಸಿದ ರಾಮಚಂದ್ರ
ಭರ್ಮಗರ್ಭಗೆ ಒಲಿದು ಪೇಳಿದ ಮಹಾಮಂತ್ರ
ಮರ್ಮಗಳನರಿತು ಜಪಿಸುವವನೆ ಧನ್ಯ ॥

ದೀನ–ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ

ವರದೇಂದ್ರ ಮುನಿರಚಿತ ಈ ತಂತ್ರ ಸಾರವನು

ಬರೆದೋದಿ ಕೇಳಿ ಮೋದಿಪ ಸುಜನರ

ವರಮೂಲ ರಾಮ ವೇದವ್ಯಾಸರಿಹಪರದಿ

ಕರುಣಿಪರು ಬೇಡಿದಿಷ್ಟಾರ್ಥಗಳನು ॥

ಎಂದು ಹೇಳಿ ಈ ಪದವನ್ನು ಅರ್ಥಾನುಸಂಧಾನ ಪೂರ್ವಕ ಆದರದಿಂದ ಪಠಿಸಲು ಮೋಕ್ಷವು ಸಿದ್ಧಿಸುವುದೆಂದು ವಿವರಿಸಿರುವರು. ಕನ್ನಡವೆಂದು ಭಾವಿಸಿ ನಿಂದಿಪ ಜನರು ಸೂರ್ಯನ ಉದಯ ಕಂಡು ದೂಷಿಸುವ ಗೂಬೆಗೆ ಸಮರೆಂದು ಹೇಳಿ, ಭಾಷೆ ತಾರಕವಲ್ಲ, ಭಾವತಾರಕ ಎಂದು ಉತ್ತಮ ಸಲಹೆ ಸೀಡಿರುವರು. ಇಷ್ಟು ಮಾತ್ರವಲ್ಲದೆ ಶ್ರೀ ವರದೇಂದ್ರರು ತಮ್ಮ ಈ ಕೃತಿಯಲ್ಲಿ ಜಗನ್ನಾಥದಾಸರಿಗೆ 'ರಂಗಒಲಿದ' 'ಶ್ರೀ' ಎಂಬ ಎರಡು ವಿಶೇಷಣಗಳನ್ನು ಹಾಕುತ್ತಾ ಗೌರವಾರ್ಥ ಸೂಚಕವಾದ ಬಹುವಚನ ಪ್ರತ್ಯಯವನ್ನು ಜೋಡಿಸಿರುವರು. (ರಂಗವಲಿದ ಶ್ರೀ ಜಗನ್ನಾಥದಾಸರು) ವರದೇಂದ್ರರ ಈ ಪ್ರಯೋಗಗಳು ಜಗನ್ನಾಥದಾಸರ ನಿಲುವನ್ನು ವ್ಯಕ್ತಿತ್ವವನ್ನು, ಸೂಚಿಸುತ್ತಿರುವವು.

ವಿಜಯದಾಸಾದಿ ಅಪರೋಕ್ಷ ಜ್ಞಾನಿಗಳು ಸಹ ತಮ್ಮ ತಮ್ಮ ಕವನಗಳ ಕೊನೆಯಲ್ಲಿ ಅನೇಕ ಕಡೆ ಫಲಗಳನ್ನೂ ವರ್ಣಿಸಿರುವರು. ಈ ಮಾತುಗಳೆಲ್ಲ ಕೇವಲ ಅರ್ಥವಾದಗಳೆಂದು ಹೇಳಿದಲ್ಲಿ ಎಲ್ಲಕ್ಕೂ ಇದೇ ಪರಿಸ್ಥಿತಿ ಬರಬೇಕಾಗುವುದು. ನಿಸ್ವಾರ್ಥತೆಯಿಂದ ಲೋಕಕಲ್ಯಾಣಕ್ಕಾಗಿಯೇ ಜೀವಿಸುತ್ತಾ ಸರ್ವತ್ರ-ಸರ್ವದಾ ಭಗವಂತನನ್ನು ಕಾಣುವ ಜ್ಞಾನಿಗಳ ವಾಕ್ಯ ಎಂದಿಗೂ ಅಸತ್ಯವಾಗಲಾರದು. 'ವಿಶ್ವಾಸಃ ಫಲದಾಯಕಃ' ಎಂಬ ಆರ್ಯೋಕ್ತಿಯಂತೆ ವಿಶ್ವಾಸ ಇರಬೇಕು. ಕವಿಶ್ರೇಷ್ಠನಾದ ಭವಭೂತಿಯು

**ಲೌಕಿಕಾನಾಂ ಹಿ ಸಾಧೂನಾಂ ಅರ್ಥಂ ವಾಗನುವರ್ತತೆ**

**ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋನುಧಾವತಿ**

ಎಂದು ಹೇಳಿ ಜ್ಞಾನಿಗಳ ಶಬ್ದಗಳನ್ನು ಅರ್ಥಗಳು ತಾವಾಗಿಯೇ ಅನುಸರಿಸುವವು. ಮಹನೀಯರಾಡಿದ ಮಾತುಗಳು ಎಂದಿಗೂ ಅಸತ್ಯವಾಗವು. ಭಕುತರಾಡಿದ ಮಾತುಗಳನ್ನು ಭಕ್ತವತ್ಸಲನಾದ ಶ್ರೀಹರಿ ತಾನೇ ನಿಂತು ನಡೆಸಿಕೊಡುವನು. ಇದಕ್ಕೆ ಬೇಕಾದ ಉದಾಹರಣೆಗಳನ್ನು ಭಾಗವತಾದಿ ಪುರಾಣಗಳಲ್ಲಿ ನಾವು ಎಲ್ಲೆಲ್ಲೂ ನೋಡಬಹುದು.

**(ಮುಂದುವರಿಯುವುದು)**

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ

ಮುಖಪುಟಲೇಖನ

# ಭವದ ಬಂಧ ಬಿಡಿಸೋ ತಂದೆ ಗೋವಿಂದ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ಫಾಲ್ಗುಣ ಮಾಸದ ನಿಯಾಮಕ ಗೋವಿಂದ ರೂಪಿ ಪರಮಾತ್ಮ. ಕೇಶವಾದಿ ಮೂರ್ತಿಗಳಲ್ಲಿ ನಾಲ್ಕನೆಯದ್ದಾದ ಗೋವಿಂದ ರೂಪಿ ಪರಮಾತ್ಮನು ಮೇಲಿನ ಬಲಗೈಲಿ ಗದೆಯನ್ನು ಎಡಗೈಲಿ ಪದ್ಮವನ್ನು ಕೆಳಗಿನ ಎಡಗೈಲಿ ಶಂಖವನ್ನು ಬಲಗೈಲಿ ಚಕ್ರವನ್ನು ಧರಿಸಿರುವನು ಎಂದು ಶ್ರೀಮದಾಚಾರ್ಯರು ತಿಳಿಸಿದ್ದಾರೆ.

**ಸ್ವರ್ಗೇಷು ಪಶುವಾಗ್ವಜ್ರದಿಙ್‌ನೇತ್ರಘೃಣಿಭೂಜಲೇ।**
**ಲಕ್ಷ್ಯದೃಷ್ಟ್ಯೋಃ ಸ್ತ್ರಿಯಾಂ ಪುಂಸಿ ಗೌರ್ಲಿಂಗಂ ಚಿಹ್ನಶೇಫಸೋಃ**

ಎಂಬ ಅಮರ ಕೋಶದ ಪ್ರಕಾರ ಗೋ ಶಬ್ದಕ್ಕೆ ಅನೇಕ ಅರ್ಥಗಳಿವೆ. ಸ್ವರ್ಗೇಷು=ಮೋಕ್ಷವೇ ಮೊದಲಾದ ಪದಗಳು. ಪಶು=ಗೋವು ವಾಕ್=ವೇದಾದಿಮಾತುಗಳು ವಜ್ರ=ವಜ್ರಾಯುಧ ದಿಕ್=ದಿಕ್ಕುಗಳು, ನೇತ್ರ=ಕಣ್ಣು, ಘೃಣಿ=ಕಿರಣ, ಭೂ=ಭೂಮಿ, ಜಲ=ನೀರು, ಲಕ್ಷ್ಯ=ಹೊಂದಬೇಕಾದಂತಹ ಲಕ್ಷ್ಯ, ದೃಷ್ಟಿ=ಜ್ಞಾನ ಎಂದು ಅರ್ಥ. ಗೋ=ಮೋಕ್ಷ ಎಂದು ಅರ್ಥ. **ಗಾಂ ವೇದಯತಿ=ಇತಿ ಗೋವಿಂದಃ** ಅಂದರೆ ಮೋಕ್ಷವನ್ನು ಹೊಂದಿಸಿಕೊಡುವವನು ಎಂದು ಅರ್ಥ. ಗಾಂ ವಿಂದತೀತಿ ಇತಿ ಗೋವಿಂದಃ. ಗೋವುಗಳನ್ನು ನಿಯಾಮಕತ್ವೇನ ಹೊಂದಿದವನು ಎಂದು ಅರ್ಥ. **ಗೋಭಿಃ ವೇದ್ಯತೇ ಇತಿ ಗೋವಿಂದಃ** ಅಂದರೆ ವೇದಗಳಿಂದಲೇ ತಿಳಿಯಲ್ಪಡುವವನು ಎಂದು ಅರ್ಥ. **ಗೋಭಿರೇವ ಯತೋವೇದ್ಯಃ ಗೋವಿಂದಃ ಸಮುದಾಹೃತಃ** ಎಂದು ವಿಷ್ಣುತಿಲಕದಲ್ಲಿ ಈ ಅರ್ಥವನ್ನು ತಿಳಿಸಿದ್ದಾರೆ.

**ಗಾಂ ವಿಂದತೀತಿ ಗೋವಿಂದಃ** ವಜ್ರಾಯುಧವನ್ನು ನಿಯಾಮಕತ್ವೇನ ಹೊಂದಿದವನು ಎಂದು ಅರ್ಥ. ಇನ್ನೊಂದು ರೀತಿಯಾಗಿ ಇಂದ್ರನಿಗೆ ವಜ್ರಾಯುಧವನ್ನು ಹೊಂದಿಸಿಕೊಟ್ಟವನು ಎಂದು ಅರ್ಥ. **ಗಾಂ ವೇದಯತಿ ಗೋವಿಂದಃ** ದಿಕ್ಕುಗಳನ್ನು ಅಷ್ಟದಿಕ್ಪಾಲಕರಿಗೆ ಹೊಂದಿಸಿಕೊಟ್ಟವನು ಎಂದು ಅರ್ಥ. ಗಾಂ ವಿಂದತೀತಿ ಗೋವಿಂದ–ಕಣ್ಣುಗಳನ್ನು ನಿಯಾಮಕತ್ವೇನ ಹೊಂದಿದವನು ಎಂದು ಅರ್ಥ. **ಗಾಂ ವೇದಯತೀತಿ ಗೋವಿಂದಃ** ಸೂರ್ಯನಿಗೆ ಕಿರಣಗಳನ್ನು ಹೊಂದಿಸಿಕೊಟ್ಟವನು ಎಂದು ಅರ್ಥ. **ಗಾಂ ಸ್ವಕಕ್ಷಾಂ ವೇದಯತಿ**

ಹಸಿದವರಿಗೆ ಅನ್ನವನ್ನು ನೀಡಿ

**ಇತಿ ಗೋವಿಂದಃ** ವರಾಹರೂಪಿಯಾಗಿ ಹಿರಣ್ಯಾಕ್ಷನನ್ನು ಕೊಂದು ಭೂಮಿಗೆ ತನ್ನ ಕಕ್ಷೆಯನ್ನು ಇತ್ತವನು ಎಂದು ಅರ್ಥ. **ಗಾಂ ವೇದಯತೀತಿ ಗೋವಿಂದ**–ಕಾಲಕಾಲಕ್ಕೆ ಮಳೆಯನ್ನು ಸುರಿಸಿ ವಿಶ್ವಕ್ಕೆಲ್ಲಾ ನೀರನ್ನು ಕೊಡುವವನು ಎಂದು ಅರ್ಥ. **ಗಾಂ ವೇದಯಿತೀತಿ ಗೋವಿಂದಃ** ಎಂದರೆ ಲಕ್ಷ್ಯವನ್ನು ಹೊಂದಿಸುವವನು ಎಂದು ಅರ್ಥ. ಎಲ್ಲರ ಲಕ್ಷ್ಯವು ಸುಖದಲ್ಲಿ. ದುಃಖರಹಿತವಾದ ಸುಖವು ಸಿಗುವುದು ಮೋಕ್ಷದಲ್ಲಿ ಮಾತ್ರ. ಆದ್ದರಿಂದ ಲಕ್ಷ್ಯವನ್ನು ಹೊಂದಿಸುವವನು ಎಂದರೆ ಮೋಕ್ಷವನ್ನು ಕೊಡುವವನು ಎಂದು ಅರ್ಥ. **ಗಾಂ ವೇದಯಿತೀತಿ ಗೋವಿಂದ** ದೃಷ್ಟಿಯನ್ನು ಕೊಡುವವನು ಅಂದರೆ ತತ್ವಜ್ಞಾನವನ್ನು ಕರುಣಿಸುವವನು ಎಂದು ಅರ್ಥ. ಈ ರೀತಿಯಾಗಿ ಗೋವಿಂದ ಶಬ್ದಕ್ಕೆ ಅನೇಕ ಅರ್ಥಗಳನ್ನು ಹೇಳಬಹುದು.

**ಕವಳೇ ಕವಳೇ ಕುರ್ವನ್ ಗೋವಿಂದಸ್ಯಾನು ಕೀರ್ತನಂ।** ಎಂಬಲ್ಲಿ ಊಟ ಮಾಡುವ ಕಾಲದಲ್ಲಿ ಪ್ರತಿ ತುತ್ತನ್ನು ಉಣ್ಣುವಾಗಲು ಗೋವಿಂದ ನಾಮ ಸ್ಮರಣೆಯನ್ನು ಮಾಡಬೇಕೆಂದು ತಿಳಿಸಿದ್ದಾರೆ. ಹಾಗೇ ನಮ್ಮ ಹಿರಿಯರೂ ಕೂಡ ಭೋಜನ ಕಾಲದಲ್ಲಿ ಗೋವಿಂದ ನಾಮ ಸ್ಮರಣೆಯನ್ನು ಮಾಡುತ್ತಾ ಬಂದು ಈಗಲೂ ಕೂಡ ಅದು ಸಂಪ್ರದಾಯವೇ ಆಗಿ ಮುಂದುವರಿಯುತ್ತಾ ಬಂದಿದೆ.

ಶ್ರೀಮನ್‌ಮಧ್ವಾಚಾರ್ಯರು ದ್ವಾದಶ ಸ್ತೋತ್ರದಲ್ಲಿ **ಗೋವಿಂದ ಗೋವಿಂದ ಪುರಂದರ ವಂದೇ ಸ್ಕಂದ ಸನಂದನ ವಂದಿತಪಾದ।** ಎಂಬುದಾಗಿ ಗೋವಿಂದನನ್ನು ಪುರಂದರ ಎಂಬ ಹೆಸರಿನಿಂದ ಕರೆದಿದ್ದಾರೆ. ಪುರಂದರ ಎಂದರೆ ಪುರಂ ದರತೀತಿ ಪುರಂದರಃ ಅಂದರೆ ನಮ್ಮ ಪ್ರಾಕೃತಿಕ ಶರೀರ ಹಾಗೂ ಲಿಂಗ ಶರೀರಗಳನ್ನು ನಾಶ ಮಾಡುವವ ಎಂದು ಅರ್ಥ. ಈ ಶರೀರಗಳನ್ನು ನಾಶಮಾಡುವವ ಎಂದರೆ ಸ್ವರೂಪ ಸುಖವನ್ನು ಕೊಡುವವ ಎಂದು ಅರ್ಥ.

ಕನಕದಾಸರೂ ಕೂಡ ಗೋವಿಂದನನ್ನು ಈ ರೀತಿಯಾಗಿಯೇ ಸ್ತುತಿಸಿದ್ದಾರೆ. ಹಿಂದನೇಕ ಯೋನಿಗಳಲ್ಲಿ ಬಂದು ಬಂದು ನೊಂದೆ ನಾನು **ಇಂದು ಭವದ ಬಂಧ ಬಿಡಿಸೋ ತಂದೆ ಗೋವಿಂದ।** ಅಂದರೆ ಈ ಮನುಷ್ಯ ಶರೀರವು ಬರಬೇಕಾದರೆ ಅದರ ಮುಂಚೆ ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಹುಟ್ಟಿ ನಂತರ ಮನುಷ್ಯ ಜನ್ಮ ಬರುತ್ತದೆ. ಆದರೆ ಈ ಯಾವ ಜನ್ಮದಲ್ಲಿಯು ಕೂಡ ಸುಖವನ್ನು ಅನುಭವಿಸಲೇ ಇಲ್ಲ. ಬರೀ ದುಃಖವನ್ನೇ ಅನುಭವಿಸಿದ್ದೇನೆ. ಆದ್ದರಿಂದ ದುಃಖಪ್ರದವಾದ ಈ ಸಂಸಾರ ಬಂಧನವನ್ನು ಬಿಡಿಸು ಎಂದು ಪ್ರಾರ್ಥಿಸಿದ್ದಾರೆ. ಸಂಸಾರ ಬಂಧನವನ್ನು ಬಿಡಿಸುವುದು ಎಂದರೆ ಮೋಕ್ಷವನ್ನು

**ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ**

ಕೊಡುವುದು ಎಂದೇ ಅರ್ಥ. ನಾವು ಹಿಂದೆ ಗೋವಿಂದ ಎಂಬ ಶಬ್ದಕ್ಕೆ ಮೋಕ್ಷಪ್ರದಾತೃ ಎಂಬ ಅರ್ಥವನ್ನು ನೋಡಿದ್ದೇವೆ. ಆದ್ದರಿಂದಾಗಿಯೇ ಶ್ರೀಮಧ್ವಾಚಾರ್ಯರು ಹಾಗೂ ಕನಕದಾಸರು ಗೋವಿಂದನನ್ನು ಮೋಕ್ಷವನ್ನು ಕೊಡುವವನು ಎಂದು ಸ್ತುತಿಸುದ್ದಾರೆ. ಆದ್ದರಿಂದ ನಾವು ಕೂಡ ಮೋಕ್ಷಪ್ರದನಾದ ಗೋವಿಂದ ರೂಪಿ ಪರಮಾತ್ಮನನ್ನು ಧ್ಯಾನಿಸಿ ಕೃತಾರ್ಥರಾಗೋಣ. ★

---

(19ನೇ ಪುಟದಿಂದ)

ಕಟ್ಟಿಗೆಗೆಂದು ಮನುಷ್ಯನೊಬ್ಬ ಮರವೇರಿದ್ದ. ಅದೇ ಮರವನ್ನೇ ತಕ್ಷಕ ಕಚ್ಚಿದ. ಮರದೊಂದಿಗೆ ನರನೂ ಮರಣ ಹೊಂದಿದ್ದು ವಿಪ್ರನ ವಿದ್ಯಾಬಲದಿಂದ ಮರ ಬದುಕಿದಾಗ ನರನೂ ಬದುಕಿ ಅಮರನಾದ. ಅವನ ಮುಖದಿಂದ ನಮಗೆ ಈ ವಿಷಯ ತಿಳಿಯಿತು.

ಆ ವಿಷವೈದ್ಯ ವಿಪ್ರ ರಾಜನ ಬಳಿಗೆ ಬಂದಿದ್ದರೆ ರಾಜ ಬದುಕುತ್ತಿದ್ದರೇನೋ. ಶೃಂಗಿ ನೆಪ ಮಾತ್ರ. ಎಲ್ಲ ತಕ್ಷಕನದೇ ಹೊಂಚು. ಸಂಚು. ಬದುಕಿಸಲು ಬಯಸಿದ ವಿಪ್ರನಿಗೆ ಹಣ ಕೊಟ್ಟು ಕಳುಹಿಸಿ ಮೋಸಮಾಡಿದ ತಕ್ಷಕನಿಗೆ ತಕ್ಕ ಶಾಸ್ತಿ ಆಗಬೇಕು. ಸಲಹೆ ಸೂಚನೆ ಕೊಡಿರಿ ಮಂತ್ರಿಗಳೇ ಎಂದ ಜನಮೇಜಯ.

ತನಗೆ ಅಪಮಾನ ಮಾಡಿದ ರಾಜನ ಮೇಲೆಯೂ ಸಹನೆ ತೋರಿದ ಶಮೀಕ ಮುನಿಗಳ ಕ್ಷಮಾಶೀಲತೆ ಅಚ್ಚರಿ ಮೂಡಿಸುತ್ತದೆ. ಬ್ರಾಹ್ಮಣರಿಗೆ ಎಂತಹ ಸಂಯಮ ವಿರಬೇಕು ಎಂದು ಶಮೀಕರಿಂದ ಕಲಿಯಬೇಕು. ಮಕ್ಕಳು ವಯಸ್ಸಿಗೆ ಬಂದ ಮೇಲೆಯೂ ತಪ್ಪಿ ನಡೆದರೆ ತಂದೆ ಬುದ್ಧಿ ಹೇಳಬೇಕು. ತಪಸ್ಸಿನ ಸಾಧನೆಯ ದಾರಿಯಲ್ಲಿ ನಡೆವವರಿಗೆ ಕ್ಷಮಾ ಇರಬೇಕು. ಸಹನೆ ಸ್ಥೈರಣೆಯಿರದೆ ಕೋಪವಿದ್ದರೆ ಎಲ್ಲ ಪುಣ್ಯ ನಾಶವಾಗುತ್ತದೆ. ತಾನು ಮಾಡಿದ ತಪ್ಪಿಗೆ ಶಿಕ್ಷೆ ಒದಗಿದಾಗ ಅದನ್ನು ಸ್ವಾಗತಿಸಿ ಶುದ್ಧನಾಗಬೇಕು ಪರೀಕ್ಷಿತನಂತೆ.

ಭಗವಂತ ನಮ್ಮನ್ನು ರಕ್ಷಣೆ ಮಾಡಬೇಕೆಂದು ಸಂಕಲ್ಪಿಸಿದರೆ ಮಾತ್ರ ನಾವು ಸುರಕ್ಷಿತ. ನಮ್ಮ ನಾಶ ಅವನ ಸಂಕಲ್ಪಕ್ಕೆ ಬಂದರೆ ನಮ್ಮನ್ನು ಯಾರೂ ರಕ್ಷಿಸಲು ಸಾಧ್ಯವಿಲ್ಲ. ಪರೀಕ್ಷಿತ ತನ್ನ ತಾಯಿಯ ಉದರದಲ್ಲಿದ್ದಾಗ ಕೃಷ್ಣ ಅವನನ್ನು ರಕ್ಷಿಸುವ ಪಣತೊಟ್ಟ. ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ಕಾಪಾಡಿದ. ಈಗ ತಕ್ಷಕನಿಂದ ಮರಣ ಅವನ ಇಚ್ಛೆಗೆ ಬಂತು. ಯಾವ ವೈದ್ಯರಿಗೂ ಅವನನ್ನು ಉಳಿಸಲಾಗಲಿಲ್ಲ. ★

**ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ**

ಭಾಗ–1

# ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ

–ಡಿ. ಗುರುಪ್ರಸಾದ್ ಭಟ್

**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ**
**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥**

ಈ ಶ್ಲೋಕದಲ್ಲಿರತಕ್ಕ ಗೀತಾಚಾರ್ಯನ ಅಭಿಪ್ರಾಯವನ್ನು ನಾವು ತಿಳಿಯುವುದಾದರೆ, ಯಾರು ನನ್ನನ್ನು ಎಲ್ಲೆಡೆ ಕಾಣುತ್ತಾನೋ, ಮತ್ತು ಎಲ್ಲವನ್ನೂ ನನ್ನಲ್ಲಿ ಕಾಣುತ್ತಾನೋ ಅವನು ಯಾವ ವಿಧದ ನಾಶವನ್ನು ಹೊಂದಲಾರ. ಯಾಕೆಂದರೆ ನನ್ನನ್ನೇ ಎಲ್ಲಾ ಕಡೆ, ಎಲ್ಲದ್ದರಲ್ಲೂ ಅವನು ಕಾಣುತ್ತಿರುವ ಸಂದರ್ಭದಲ್ಲಿ ನಾನೇ ಅವನ ಒಳಗೆ ಇದ್ದು ಅವನನ್ನು ಎಲ್ಲಾ ವಿಧದ ನಾಶದಿಂದ ಪಾರು ಮಾಡಿ ರಕ್ಷಿಸುತ್ತಿರುತ್ತೇನೆ. ಯಾಕೆಂದರೆ ಈ ರೀತಿ ಅವನು ತಿಳಿದುಕೊಂಡಿರುವುದರಿಂದ ಅವನೇ ನಿಜವಾದ ಜ್ಞಾನಿ. ಆದ್ದರಿಂದಲೇ ಅವನು ನಿಜವಾದ ಭಕ್ತನಲ್ಲವೆ? ಅವನು ನನ್ನನ್ನು ಮರೆಯದಿರುವಾಗ (ಮರೆಯಲು ಸಾಧ್ಯವಿಲ್ಲದಿರುವಾಗ) ನಾನು ಅವನನ್ನು ಹೇಗೆ ಮರೆಯಲಿ? ಅಂಥಹ ಭಕ್ತನು ನೋಡತಕ್ಕ ಎಲ್ಲಾ ಜಡವಸ್ತುಗಳಲ್ಲಿ ನಿಜವಾದ ವಸ್ತುವಾಗಿ ನಾನೇ ಕಾಣುತ್ತೇನೆ. **'ವೇದ್ಯಂ ವಾಸ್ತವಮತ್ರ ವಸ್ತು ಶಿವದಂ'** ಎಂಬಂತೆ ಆ ನಿಜವಾದ ವಸ್ತುವಿನಲ್ಲೇ ಜಡವಸ್ತುವನ್ನು, ಜಡವಸ್ತುವಿನ್ನಲೇ ನಿಜವಾದ ವಸ್ತುವನ್ನು ಭಕ್ತ ಕಾಣುತ್ತಾನೆ. ಜಡವಸ್ತುವಿನ ಒಳಗೆ, ಹೊರಗೆ ಅಂದರೆ ಒಳಗೆ ನಿಯಾಮಕನಾಗಿ, ಹೊರಗೆ ಧಾರಕ ಶಕ್ತಿಯಾಗಿ ನಿಂತಿರುವ ನನ್ನನ್ನೇ ಮುಖ್ಯ ಆಶ್ರಯವಾಗಿ ಅವನು ಕಾಣುತ್ತಾನೆ. ಆದ್ದರಿಂದ ನಾನು ಅವನನ್ನು ಬಿಡಲಾರೆ. ಯಾಕೆಂದರೆ ಅವನು ನನ್ನನ್ನ ಬಿಡುವುದಿಲ್ಲ ತಾನೆ?

ಪ್ರಕೃತ ಸಾಧಕ ಜೀವನು ಮೂರು ತತ್ವವನ್ನು ತಿಳಿಯಲೇ ಬೇಕಾಗುತ್ತದೆ. ಜಗತ್ತು, ಜೀವ ಮತ್ತು ಭಗವಂತ. ಆಚಾರ್ಯಮಧ್ವರೂ ಕೂಡ ಪಂಚಭೇದವನ್ನು ಈ ಮೂರಕ್ಕೆ ಮಾತ್ರ ತಿಳಿಸಿರುತ್ತಾರೆ. ಭಗವಂತನನ್ನು ತಿಳಿದು, ಮೋಕ್ಷವನ್ನು ಹೊಂದುವುದು ಜೀವನ ಮುಖ್ಯ (ಪರಮ) ಗುರಿ. ಆ ಭಗವಂತನನ್ನು ಈ ಜಡವಾದ ವಿಶ್ವದಲ್ಲೇ ಇದ್ದು ತಿಳಿಯಬೇಕಲ್ಲವೇ? ಈ ಜಡವಿಶ್ವ ಜೀವನಿಗೆ ದೇವರನ್ನು ತಿಳಿಯಲು ಇರುವ ಮಾಧ್ಯಮವಾಯಿತು. ಆದ್ದರಿಂದ ಸಾಧಕನು ಮುಖ್ಯವಾಗಿ ಭಗವಂತನ ಅನಂತ

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗಬೇಡ.

ರೂಪಗಳಿದ್ದರೂ ಕೂಡ ಈ ವಿಶ್ವದಲ್ಲಿರತಕ್ಕ ವಿಶ್ವನಾಮಕ ರೂಪವನ್ನೇ ಅವಶ್ಯವಾಗಿ ಮೊದಲು ತಿಳಿಯತಕ್ಕದ್ದು. ಪ್ರಾಯಶಃ ಅದಕ್ಕೋಸ್ಕರವೇ ವಿಷ್ಣುಸಹಸ್ರನಾಮದಲ್ಲೂ ಈ **'ವಿಶ್ವ'** ನಾಮ ಮೊದಲು ಉಲ್ಲೇಖಿಸಲ್ಪಟ್ಟು ವಿಶಿಷ್ಟತೆಯನ್ನು ಪಡೆದಿದೆ. ಯಾಕೆಂದರೆ ಈ ಜಡ ವಿಶ್ವವನ್ನು ತಿಳಿಯದೇ ವಿಶ್ವನನ್ನು ತಿಳಿಯಲು ಸಾಧ್ಯವಿಲ್ಲ ತಾನೇ? ಈ ಜಡವಿಶ್ವವನ್ನು ತಿಳಿಯುವುದು ಅಂದರೆ ಏನು? ಅದು ಹೇಗೆ? ದೇವರು ನಮ್ಮ ಚಕ್ಷುರಿಂದ್ರಿಯಕ್ಕೆ ಗೋಚರನಾಗಲಾರ. ಆದ್ದರಿಂದ ದೇವರಿಂದ ಸೃಷ್ಟವಾದ ಈ ಜಗತ್ತನ್ನು ಕಂಡು ದೇವರ ಅಸ್ತಿತ್ವವನ್ನು ಯುಕ್ತಿಯಿಂದ ನಾವು ಸಾಮಾನ್ಯವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಈ ಜಗತ್ತು ನಮ್ಮ ಕಲ್ಪನೆಗೆಟುಕದ ಅದ್ಭುತವಾದ ರಹಸ್ಯ ತಾನೇ? **'ಬಹುಚಿತ್ರ ಜಗದ್‌ಬಹುಧಾಕರಣಾತ್ ಪರಶಕ್ತಿರನಂತಗುಣಃ ಪರಮಃ'** ಎಂಬ ಆಚಾರ್ಯ ಮಧ್ವರ ಮಾತಿನಂತೆ ಈ ಜಡವಿಶ್ವ ಜೀವರಿಂದ ಎಂದಿಗೂ ನಿರ್ಮಾಣಗೊಳ್ಳಲು ಸಾಧ್ಯವಿಲ್ಲ ತಾನೇ? ಆದ್ದರಿಂದ ಜೀವರಿಗೆ ದೇವರನ್ನರಿಯಲು ಏನನ್ನಾದರೂ ಸಾಧಿಸಲು ಈ ಜಗತ್ತು ಮುಖ್ಯ ಸಾಧನವಾಗಿದೆಯಲ್ಲವೇ? ಆದ್ದರಿಂದ ಸಾಧಕ ಜೀವನು ಜಗತ್ತಿನ ರಹಸ್ಯವನ್ನು ಪೂರ್ಣವಾಗಿ ತಿಳಿದ ಮೇಲೆ ತನ್ನನ್ನು ತಾನು ಅಂದರೆ ಜೀವನನ್ನು ತಿಳಿದುಕೊಳ್ಳಬೇಕಾಗುತ್ತದೆ. ಇದೇ ಆತ್ಮಸಾಕ್ಷಾತ್ಕಾರವೆಂದು ಶಾಸ್ತ್ರದಲ್ಲಿ ನಿರ್ಣಯಿಸಲ್ಪಟ್ಟಿದೆ. ದೇವರ ಅಸ್ತಿತ್ವ ಮತ್ತು ರಹಸ್ಯ ಈ ಜಗತ್ತು ಮತ್ತು ಜೀವರಲ್ಲೇ ಅಡಗಿದೆಯಲ್ಲವೆ? ಆದ್ದರಿಂದಲೇ ಭಗವಂತ ತನ್ನ ಅಸ್ತಿತ್ವವನ್ನು ಮತ್ತು ಸ್ವರೂಪವನ್ನು ಅರಿತುಕೊಳ್ಳಲು ಅನಾದಿ ನಿತ್ಯರಾದ ಈ ಜೀವರುಗಳಿಗೆ ಸಾಧನಾಶರೀರವನ್ನು ಸೃಷ್ಟಿಸಿ, ಈ ಜಡಜಗತ್ತನ್ನು ನಿರ್ಮಾಣ ಮಾಡಿ, ಆ ಜಗತ್ತೆಲ್ಲ ಸ್ವರೂಪಯೋಗ್ಯತೆಗೆ ಅನುಗುಣವಾದ ಸಾಧನೆ ಆಗುವಂತೆ ಮಾಡಿ (ಜೀವರುಗಳ ಮೂಲಕ) ತಾನು ಅಗೋಚರವಾಗಿ ನಿಂತ ಮಾತ್ರವಲ್ಲದೇ ಸಾಧನಾಮಾರ್ಗದಲ್ಲಿ ಎಲ್ಲಾ ಜೀವರಿಗೂ, ಅನಾದಿಕಾಲದಿಂದ ಒಂದು ಪ್ರಶ್ನೆಯಾಗಿಯೇ ಉಳಿದುಕೊಂಡನಲ್ಲವೇ? **'ಸಂಪ್ರಶ್ನಂ ಭುವನಾ ಯಂತ್ಯನ್ಯಾ!'** ಆದ್ದರಿಂದ ದೇಹವನ್ನು ಧರಿಸಿಕೊಂಡು ಬಂದಿರುವ ಜೀವರು ಭಗವಂತನನ್ನು ಅರಿಯಲು ಅವನಿಂದಲೇ ಸೃಷ್ಟವಾದ ಈ ಜಗತ್ತಿನಲ್ಲಿ ಇದ್ದುಕೊಂಡು, ಅವನ ವಿಶ್ವರೂಪದ ಬಗ್ಗೆ ಮೊದಲು ತಿಳಿದುಕೊಂಡು ಅಂದರೆ ವಿಶ್ವವನ್ನು ತಿಳಿದು ವಿಶ್ವನನ್ನು ತಿಳಿಯಲು ಪ್ರಯತ್ನಿಸಬೇಕು. ಆ ಮೂಲಕ ನಮ್ಮನ್ನು ನಾವು ಮೊದಲು ತಿಳಿದುಕೊಳ್ಳೋಣ ಎಂದು ಆಶಿಸುತ್ತಾ, ಈ ವಿಶ್ವದ ಸ್ವರೂಪವನ್ನು ಮುಂದಿನ ಸಂಚಿಕೆಯಲ್ಲಿ ಯಥಾಶಕ್ತಿ ಯಥಾಮತಿಯಗಿ ವಿಶ್ಲೇಷಿಸೋಣವೆಂದು ಆಶಿಸುತ್ತಾ ವಿಶ್ವಾನುಗ್ರಹಕ್ಕೆ ಪಾತ್ರರಾಗೋಣ. ★

**ಬಂದ ಹಣದಲ್ಲಿ ಸ್ವಲ್ಪಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ**

## ಉಡುಪಿ ಪಲಿಮಾರುಮಠದಲ್ಲಿ ಬಾಲಕ–ಬಾಲಕಿಯರಿಗೆ ಧಾರ್ಮಿಕ–ಆಧ್ಯಾತ್ಮಿಕ ಶಿಕ್ಷಣ ಶಿಬಿರ

ಪ್ರತಿವರ್ಷದಂತೆ ಈ ಬಾರಿಯೂ ಏಪ್ರಿಲ್ 11ರಿಂದ 27ರವರೆಗೆ ಉಡುಪಿ ಪಲಿಮಾರು ಮಠದಲ್ಲಿ ಬಾಲಕ–ಬಾಲಕಿಯರಿಗಾಗಿ ಧಾರ್ಮಿಕ–ಆಧ್ಯಾತ್ಮಿಕ ಶಿಕ್ಷಣ ಶಿಬಿರವು ನಡೆಯಲಿದೆ. ಪ್ರತಿದಿನ ಅಪರಾಹ್ಣ 2–30ರಿಂದ 6–15ರವರೆಗೆ ನಡೆಯಲಿರುವ ಈ ಶಿಬಿರದಲ್ಲಿ 6–9 ವರ್ಷದ ಅನುಪನೀತ ವಟುಗಳಿಗೆ ಸ್ತೋತ್ರ, ಪದ್ಯ ಹಾಗೂ ಕೆಲವು ಧಾರ್ಮಿಕ ಚಟುವಟಿಕೆಗಳನ್ನು, ಉಪನೀತವಟುಗಳಿಗೆ ಜಪ, ಪೂಜೆ, ಬ್ರಹ್ಮಯಜ್ಞ, ಬ್ರಾಹ್ಮಣಾರಾಧನೆ, ಕಲ್ಪೋಕ್ತಪೂಜೆ, ಪಂಚಗವ್ಯಮೇಲನ ಮುಂತಾದ ಧಾರ್ಮಿಕ ವಿಧಿಗಳನ್ನು, ಪುರುಷಸೂಕ್ತ, ಶ್ರೀಸೂಕ್ತ, ಪವಮಾನ, ರುದ್ರಾಧ್ಯಾಯ ಮುಂತಾದ ವೇದಭಾಗಗಳನ್ನೂ, ವಿಷ್ಣುಸಹಸ್ರನಾಮ, ಹರಿವಾಯುಸ್ತುತಿ ಮುಂತಾದ ಅನೇಕ ಸ್ತೋತ್ರಗಳನ್ನು ಆರುವರ್ಷಗಳ ಶಿಬಿರದ ಅವಧಿಯಲ್ಲಿ ಬೋಧಿಸಲಾಗುತ್ತದೆ. ಹತ್ತು ವರ್ಷ ಮೇಲ್ಪಟ್ಟ ಬಾಲಕಿಯರಿಗೆ ಲಕ್ಷ್ಮೀಶೋಭಾನೆ, ಹರಿದಾಸರ ಕೀರ್ತನೆಗಳು, ಹರಿಕಥಾಮೃತಸಾರ, ವಿವಿಧ ಸ್ತೋತ್ರಗಳು, ಬಗೆಬಗೆಯಿಂದ ಹೂಕಟ್ಟುವುದು, ರಂಗೋಲಿ ಬಿಡಿಸುವುದು ಮುಂತಾದ ಪ್ರಾಚೀನ ಕಲೆಗಳನ್ನು, ಸಂಪ್ರದಾಯಗಳನ್ನು, ಮಾನಸಿಕ ಸ್ಥೈರ್ಯಕ್ಕೆ ಉಪಯುಕ್ತವಾದ ವಿಷಯಗಳನ್ನು ಐದು ವರ್ಷಗಳ ಶಿಬಿರದಲ್ಲಿ ಬೋಧಿಸಲಾಗುತ್ತದೆ.

ಆಸಕ್ತರು ಏಪ್ರಿಲ್ 10 ರ ಒಳಗಾಗಿ **ವ್ಯವಸ್ಥಾಪಕರು, ಪಲಿಮಾರು ಮಠ, ಉಡುಪಿ. ದೂರವಾಣಿ ಸಂಖ್ಯೆ: 2523402, 2530110** ಇವರಲ್ಲಿ ವಿಚಾರಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

## ಶ್ರೀ ರಾಜರಾಜೇಶ್ವರ ಪ್ರಶಸ್ತಿ ಪ್ರದಾನ

ಪಲಿಮಾರಿನ ಶ್ರೀ ಮಠದಲ್ಲಿ ಎಪ್ರಿಲ್ ತಿಂಗಳ 7,8,9 ದಿನಾಂಕದಂದು ಕ್ರಮವಾಗಿ ಯೋಗದೀಪಿಕಾ ವಿದ್ಯಾಪೀಠದ ಘಟಿಕೋತ್ಸವ, ಪೌರೋಹಿತ್ಯಗೋಷ್ಠೀ ಹಾಗೂ ಹನುಮಜ್ಜಯಂತಿಉತ್ಸವವು ನಡೆಯಲಿರುವುದು. ಘಟಿಕೋತ್ಸವದಂದು **ವಿದ್ವಾನ್ ವಟ್ಟಂಗಾಡ್ ಹರಿ ಆಚಾರ್ಯ ಶ್ರೀರಂಗಂ** ಹಾಗೂ **ವಿದ್ವಾನ್ ಶಿಬರೂರು ಹಯಗ್ರೀವ ತಂತ್ರಿಗಳು** ಇವರಿಗೆ **ಶ್ರೀ ರಾಜರಾಜೇಶ್ವರ ಪ್ರಶಸ್ತಿಗಳನ್ನು** ನೀಡಲಾಗುವುದು.

**ಶ್ರೀಯುತ ಹರಿ ಆಚಾರ್ಯರು** ತಮಿಳುನಾಡಿನ ಅನೇಕ ಪ್ರಸಿದ್ಧ ದೇವಸ್ಥಾನಗಳಲ್ಲಿ ಕುಂಭಾಭಿಷೇಕಗಳನ್ನು ನಡೆಸಿದ್ದು, ಶ್ರೀರಂಗದಲ್ಲಿ ಉತ್ತಮ ಪೌರೋಹಿತ್ಯವನ್ನು ಮಾಡುತ್ತಾ ಆಚಾರ್ಯರ ಸರ್ವಮೂಲ ಗ್ರಂಥಗಳ ಪಾಠಪ್ರವಚನವನ್ನು ನಡೆಸುತ್ತಿದ್ದರೆ, **ಶ್ರೀಯುತ ಹಯಗ್ರೀವತಂತ್ರಿಗಳು ಪೂಜ್ಯ ಶ್ರೀ ವಿಶ್ವೇಶ್ವತೀರ್ಥರಿಂದ** ಸುಧಾಂತವೇದಾಂತ ಅಧ್ಯಯನವನ್ನು ನಡೆಸಿ ಪ್ರಸಿದ್ಧ ಕಟೀಲು ದುರ್ಗಾದೇವಾಲಯದಲ್ಲಿ ಪ್ರಧಾನ ತಂತ್ರಿಗಳಾಗಿ ಸೇವೆ ಸಲ್ಲಿಸುತ್ತಾ ತಮ್ಮ ಮನೆಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಅನ್ನ–ವಸತಿಯನ್ನು ನೀಡಿ ಪಾಠವನ್ನು ಹೇಳುತ್ತಾ, ಉತ್ತಮ ಪೌರೋಹಿತ್ಯವನ್ನು ನಡೆಸುತ್ತಿರುವರು.

**ನೀಚರನ್ನಾಶ್ರಯಿಸಿ ಕೆಡಬೇಡಿ**

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ಕನ್ನಡದ ಆದಿ ಕವಿ ಯಾರು?

2) ಕಾಳಿದಾಸನ ಮೋಡಗಳ ವರ್ಣನೆಯುಳ್ಳ ಕಾವ್ಯ ಯಾವುದು?

3) ಜರತ್ಕಾರುವಿನ ಹೆಂಡತಿ ಯಾರು?

4) ಜನಕನ ಮಗಳಾಗಿ ಸೀತೆಗೆ ಬಂದ ಹೆಸರೇನು?

5) ನೆಹರೂ, ಇಂದಿರಾಗಾಂಧಿಯ ತಂದೆಯ ---------

6) ಗಾದೆ ಪೂರ್ಣಗೊಳಿಸಿ → ಆಕಳು ಕಪ್ಪಾದರೆ ................

7) ಭಾಗವತದಲ್ಲಿ ಗೋಕರ್ಣನ ತಮ್ಮ ಯಾರು?

8) ಮೇಷಾದಿ ರಾಶಿಗಳಲ್ಲಿ ಒಂದೊಂದರಲ್ಲಿ ಎಷ್ಟು ಡಿಗ್ರಿಗಳಿವೆ?

9) 'ಕ್ಷೇತ್ರಕ್ಷೇತ್ರಜ್ಞ ಯೋಗ' ಇದು ಭಗವದ್ಗೀತೆಯ ಎಷ್ಟನೇ ಅಧ್ಯಾಯ?

10) ಐದು ಅಕ್ಷರಗಳ ದೇವರ ಹೆಸರಿದು?

## ಪದ ಬಂಧದ ಉತ್ತರ

1) ನಾಯಿ 2) 7, ಶ್ವೇತವರಾಹ 3) ಬಾಣಭಟ್ಟ 4) ನಾಗಚಂದ್ರ 5) ಚೀನಾ 6) ಹಾಲುಕಪ್ಪೇ? 7) ಎಸ್. ಎಲ್ ಭೈರಪ್ಪ 8) ಮುಳ್ಳಯ್ಯನ ಗಿರಿ 9) ಶಿವರಾಮ ಕಾರಂತ 10) 1) ನಿಮ್ಮ ಇಸವಿ A ಎಂದಿರಲಿ. 2) ನಿಮ್ಮ ಇಸವಿಯಿಂದ 1ನ್ನು ತೆಗೆಯಿರಿ. 4ರಿಂದ ಭಾಗಿಸಿ ಉತ್ತರ B ಎಂದಿರಲಿ; 3) ಜನವರಿ 1ರಿಂದ ಹುಟ್ಟಿದ ದಿನಗಳ ತನಕದ ದಿನಗಳನ್ನು ನೋಡಿ. ಉತ್ತರ C ಎಂದಿರಲಿ. 4) ಈಗ A + B +C ಮಾಡಿ., 7ರಿಂದ ಭಾಗಿಸಿ. ಶೇಷವೇ ನೀವು ಹುಟ್ಟಿದ ವಾರ. ಶೇಷ 1 ಆದರೆ =ಶನಿ, 2=ರವಿ, 3=ಸೋ, 4=ಮಂ, 5=ಬುಧ, 6=ಗುರು, 7=ಶುಕ್ರ

| | | | | | | |
|---|---|---|---|---|---|---|
| 1 ವಿ | ದ್ಯಾ | 2 ಮಾ | ನ್ಯ | 3 ತ್ರೀ | ರ್ಥ | 4 ರು |
| ನ | | ಲಿ | | ರ | | ಗ್ಮಿ |
| 5 ಯ | 6 ಶ | ಕ | 7 ರ | | 8 ಘೋ | ಣೀ |
| | 9 ರ | ಜ | ನೀ | 10 ಚ | ರೇ | ಶ |
| 11 ಗ | ಭಂ | | | 12 ಪಾ | ಶ | ವಿ |
| 13 ಮ | ಗ | 14 ಧ | | ತ್ರಿ | | ಜ |
| ನ | | 15 ನ | ರ | | 16 ಪಾ | ಯ |

ನಿಜವಾದ ಮರ್ಮವನ್ನರಿಯದ ಮೂರ್ಖರನ್ನು ಎಂದಿಗೂ ಗುರುವೆಂದು ನಂಬದಿರಿ

**ಎಡದಿಂದ ಬಲಕ್ಕೆ:**

1) ಸಿಹಿಯಾದ ಭೇಟಿ (6)
4) ನಾಟ್ಯದ ಅಂಗಳದ ಒಡೆಯ (3)
5) ಮೆಲ್ಲನೆ ಬರುವ ಶನಿ (2)
6) ಗೋಡೆಯಲ್ಲಿ ನೇತಾಡುವ ಕಾಗದ (2)
7) ಮಕ್ಕಳಿಗೆ ಇಷ್ಟವಾಗುವ ಸಿಹಿ ತಿಂಡಿ (3)
8) ರಪರಪನೆ ತಿರುಗಿದ 'ದೊಡ್ಡವ' (2)
9) ಮನದಲ್ಲಿ 'ತಕ ತಕಧಿಮಿತಃ' (4)



ಉತ್ತರ ಮುಂದಿನ ಸಂಚಿಕೆಯಲ್ಲಿ

**ಮೇಲಿನಿಂದ ಕೆಳಕ್ಕೆ:**

1) ಹೂ ಪರಾಗ (4)
2) 'ವಿದ್ಯಾಧೀಶ' ರಾದ ಲಕುಮೀಪತಿ (3)
3) ಬಳ್ಳಿಯ ಸಭಾಂಗಣ (5)
7) ನಿಜವಾಗಿ ರಕ್ಷಕನಾದ ಗೆಳೆಯ (2)
9) ಕನ್ನಡದ 'ಅಮ್ಮ' ತಿರುಗಿದ್ದಾಳೆ (2)
10) 'ಕಪ್ಪೆಯ ಕೂಗು' ಸಂಸ್ಕೃತದಲ್ಲಿ (2)

ಜೀವನವೇ ಭಗವಂತನ ಪೂಜಾರೂಪವಾದ ಯಜ್ಞವಾಗಲಿ